# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 273 Issue: 273 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 07.05.2025 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2





1,30,000+
Digital E-PAPER READERS
To book Classified Display Ad
in HAMPI TIMES
Please call on
9448633038
No.1 HAMPI TIMES LEADING PRINT & DIGITAL District News Paper



ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ
ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ
-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ



Call Us for Advertisements
Good Opportunity for Branding
ನಿಮ್ಮೂರ ಜಾತ್ರೆ ಉತ್ಸವಕ್ಕೆ ಶುಭಾಶಯ, ಸಾಧಕರಿಗೆ/ ವಿದ್ಯಾರ್ಥಿಗಳಿಗೆ ಅಭಿನಂದನೆ ಕೋರಲು ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


## ಸಾವಯವ ಕೃಷಿಯಿಂದ ಆರೋಗ್ಯ ವೃದ್ಧಿ

### ಶಾಸಕ ಹೆಚ್.ಆರ್.ಗವಿಯಪ್ಪ ಹೇಳಿಕೆ | ರಸಗೊಬ್ಬರ ಬಳಕೆ ಭೂಮಿ ಫಲವತ್ತತೆ ಕುಸಿತ ಕೃಷಿ ಉಪಕರಣಗಳ ವಿತರಣೆ | ಫಲವತ್ತತೆ ಕಳೆದುಕೊಂಡರೆ ಆಹಾರದ ಅಭದ್ರತೆ ಸೃಷ್ಟಿ




**ಹಂಪಿ ಟೈಮ್ಸ್ ಹೊಸಪೇಟೆ**

ನಿರಂತರ ರಸಗೊಬ್ಬರ ಬಳಕೆಯಿಂದಾಗಿ ಮಣ್ಣಿನ ಫಲವತ್ತತೆ ಕುಸಿತಗೊಳ್ಳಲಿದೆ. ಇದಕ್ಕಾಗಿ ಅನ್ನದಾತ ಸಾವಯವ ಕೃಷಿಗೆ ಆಸಕ್ತಿ ವಹಿಸುವ ಮೂಲಕ ಕೃಷಿ ಭೂಮಿ ಮಣ್ಣಿನ ಆರೋಗ್ಯ ವೃದ್ಧಿಗೆ ಆದ್ಯತೆ ನೀಡಬೇಕಿದೆ ಎಂದು ಶಾಸಕ ಹೆಚ್.ಆರ್.ಗವಿಯಪ್ಪ ಹೇಳಿದರು.

ನಗರದ ಎಪಿಎಂಸಿ ಆವರಣದ ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ ಇಲಾಖೆ ಏರ್ಪಡಿಸಿದ್ದ ಕೃಷಿ ಉಪಕರಣಗಳ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಂಗಳವಾರ ಅವರು ಮಾತನಾಡಿದರು, ರೈತರು ತಮ್ಮ ಕೃಷಿ ಭೂಮಿಗಳ ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಹೊಣೆಗಾರಿಕೆ ಎಂದು ಭಾವಿಸಬೇಕು. ಹೆಚ್ಚುವರಿ ರಸಗೊಬ್ಬರ ಬಳಕೆ ಮತ್ತು ಕಳಪೆ ಮಣ್ಣಿನ ಆರೋಗ್ಯದಿಂದ ರೈತರಿಗೆ ನಷ್ಟವಾಗಲಿದೆ. ಮಣ್ಣಿನಲ್ಲಿ ಅನೇಕ ಗುಣಗಳು ಹಾನಿಯಾಗಲಿವೆ. ಮಣ್ಣಿನ ಗುಣ್ಣಮಟ್ಟ ಕುಸಿದರೇ ಭವಿಷ್ಯದಲ್ಲಿ ಬೆಳೆ ಇಳುವರಿಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಕೃಷಿ ಭೂಮಿಗಳು ಫಲವತ್ತತೆ ಕಳೆದುಕೊಂಡರೇ ಅಹಾರದ ಅಭದ್ರತೆ ಸೃಷ್ಟಿಯಾಗಲಿದೆ. ಹಾಗಾಗೀ ರೈತರು ಸಾವಯವ ಕೃಷಿಗೆ ಹೆಚ್ಚಿನ ಆಸಕ್ತಿ ವಹಿಸಿ ಆರ್ಥಿಕ ಅಭಿವೃದ್ಧಿ ಹೊಂದಬಹುದಾಗಿದೆ. ರಾಜ್ಯ ಸರ್ಕಾರ ಕೃಷಿಕರಿಗೆ ಸಾವಯವ ಪದ್ದತಿ ಅನುಸರಿಸಲು ಅನೇಕ ಯೋಜನೆಗಳನ್ನು ತರಲಾಗಿದೆ. ರೈತರು ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಬಳಿಕ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಬಿತ್ತನೆ ಬೀಜ ವಿತರಣೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮಣ್ಣು ಆರೋಗ್ಯ ಕಾರ್ಡ್ ವಿತರಣೆ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ತುಂತುರು ನೀರಾವರಿ ಘಟಕಗಳ ವಿತರಣೆ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ನೀರಾವರಿ ಪಿವಿಸಿ ಪೈಪ್ಸ್ ಘಟಕಗಳ ವಿತರಣೆ ಸೇರಿ ಕೃಷಿ ಯಂತ್ರೋಪಕರಣ ಯೋಜನೆಯಡಿ ಕೃಷಿ ಉಪಕರಣಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಣೆ ಮಾಡಿದರು.

ಇದೇ ವೇಳೆ ಪ್ರಮುಖವಾಗಿ ಎಪಿಎಂಸಿ ಆವರಣದಲ್ಲಿ ವೇಬ್ರಿಡ್ಜ್ ನಿರ್ಮಾಣ, ಎರೆಹುಳ ಗೊಬ್ಬರ ಮರು ವಿತರಣೆಗೆ ಕ್ರಮ, ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಆದ್ಯತೆ, ಪಾಪಿನಾಯಕಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಕೃಷಿ ಭೂಮಿಗಳಿಗೆ ನೀರಾವರಿ ಸೌಲಭ್ಯ ಕುರಿತಂತೆ ರೈತರು ಶಾಸಕರಿಗೆ ಅಹವಾಲು ಸಲ್ಲಿಸಿದರು.

ಬೆಂಗಳೂರಿನಲ್ಲಿ ನಡೆದ ಅಂತರಾಷ್ಟ್ರೀಯ ಸಿರಿಧಾನ್ಯ ಹಾಗೂ ಸಾವಯವ ಮೇಳದಲ್ಲಿ ನಡೆದ ರಾಜ್ಯಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆಯಲ್ಲಿ ವಿಜಯನಗರ ಜಿಲ್ಲೆಯಿಂದ ಪ್ರಥಮ ಸ್ಥಾನ ಪಡೆದ ಹೊಸಪೇಟೆಯ ರೂಪ ಮತ್ತು 2023-24ನೇ ಸಾಲಿನ ರಾಜ್ಯಮಟ್ಟದ ಬೆಳೆ ಸ್ಪರ್ಧೆ ಯೋಜನೆಯಡಿ ಭಾಗವಹಿಸಿ ಪರಿಶಿಷ್ಟ ಜಾತಿ ಮಹಿಳಾ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಕೊಂಡನಾಯಕಹಳ್ಳಿ ಗ್ರಾಮದ ನಿವಾಸಿ ನಾಗಮ್ಮ ಇವರಿಗೆ ಗೌರವಿಸಿ ಸನ್ಮಾನಿಸಲಾಯಿತು. ಈ ವೇಳೆ ಕೃಷಿ ಇಲಾಖೆ ಜಂಟಿ ನಿರ್ದೇಶಕ ಶರಣಪ್ಪ ಮುದಗಲ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಸ್. ಮನೋಹರ ಗೌಡ, ಕೃಷಿ ವಿಜ್ಞಾನಿಗಳಾದ ಭದ್ರೇಶ್, ಮಂಜುನಾಥ ಬಾನುವಳ್ಳಿ, ಕೃಷಿ ಇಲಾಖೆಯ ಪರಮೇಶ್ವರ ನಾಯ್ಕ, ಶರತ್ ಕುಮಾರ್, ಕೃಷಿ ಅಧಿಕಾರಿ ಎಲ್.ವೆಂಕಟೇಶ್ ಇದ್ದರು.


ಎಸ್ಸೆಸ್ಸೆಲ್ಸಿ ಹೈಸ್ಕೋರ್ ಸೀಕ್ರೇಟ್ ಏನು ಗೊತ್ತಾ ?



ಕ್ಯೂರ್ ಕೋಡ್ ಸ್ಕ್ಯಾನ್ ಮಾಡಿ
ಇಂದುಶ್ರೀ
ಮಾತಲ್ಲೆ ಕೇಳಿ....
scan to watch video


## ಮೈಕ್ರೋ ನ್ಯೂಸ್

### ಮೇ 27 ರಂದು ಸಾರಿಗೆ ಅದಾಲತ್

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಪ್ರಾದೇಶಿಕ ಸಾರಿಗೆ ಇಲಾಖೆ ವತಿಯಿಂದ ಮೇ 27 ರಂದು ಸಂಜೆ 04 ಗಂಟೆಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಸಾರಿಗೆ ಅದಾಲತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕುಂದು ಕೊರತೆಗಳಿರುವ ಸಾರ್ವಜನಿಕರು ಅರ್ಜಿ ಸಲ್ಲಿಸುವ ಮೂಲಕ ಕುಂದುಕೊರತೆಗಳನ್ನು ಇತ್ಯರ್ಥ ಪಡಿಸಿ ಕೊಳ್ಳಬಹುದು. ಸಾರ್ವಜನಿಕರು ಸಾರಿಗೆ ಅದಾಲತ್‌ನ ಉಪಯೋಗ ಪಡೆದುಕೊಳ್ಳುವ ಮೂಲಕ ಬಾಕಿ ಇರುವ ತಮ್ಮ ಅರ್ಜಿಗಳನ್ನು ಪೂರ್ಣಗೊಳಿಸಿಕೊಳ್ಳಬೇಕು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಬಿ.ಎಸ್. ಶ್ರೀನಿವಾಸಗಿರಿ ತಿಳಿಸಿದ್ದಾರೆ.

### ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ರಾಯಚೂರು**

ಸಮಗ್ರ ಶಿಕ್ಷಣ ಇಲಾಖೆಯಿಂದ ಜಿಲ್ಲೆಯ ಕೆ.ಜಿ.ಬಿ.ವಿ ವಸತಿ ಶಾಲೆ ಮತ್ತು ವಸತಿ ನಿಲಯಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಟೈಪ್ -1 ಅಥವಾ ಕೆ.ಜಿ.ಬಿ.ವಿ ಟೈಪ್-4 ವಸತಿ ಶಾಲೆ ಅಥವಾ ವಸತಿ ನಿಲಯಗಳಲ್ಲಿ 6 ರಿಂದ 8 (ಟೈಪ್-1 ವಸತಿ ಶಾಲೆ), 8 ರಿಂದ 10ನೇ ತರಗತಿ, (ಟೈಪ್-4 ವಸತಿನಿಲಯ), 8 ರಿಂದ 12 ನೇ ತರಗತಿ (ಕೆ.ಕೆ.ಜಿ.ಬಿ.ವಿ ವಸತಿ ನಿಲಯ)ಗೆ ಆಸಕ್ತರು ಆನ್‌ಲೈನ್ ಲಿಂಕ್: https:Vidyavahini.karnataka.gov.in ಅಥವಾ ಖುದ್ದು ವಸತಿ ಶಾಲೆ ಅಥವಾ ನಿಲಯಗಳಲ್ಲಿ ಭೇಟಿ ನೀಡಿ ಮೇ.20ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಕೆ.ಜಿ.ಬಿ.ವಿ ವಸತಿ ಶಾಲೆ ಅಥವಾ ವಸತಿ ನಿಲಯಗಳ ಮುಖ್ಯ ಶಿಕ್ಷಕರನ್ನು ಸಂಪರ್ಕಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರು ಹಾಗೂ ಸಮಗ್ರ ಶಿಕ್ಷಣ ಇಲಾಖೆಯ ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಗೆ ಡಿಸಿ ಚಾಲನೆ





**ಹೊಸಪೇಟೆಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಪರಿಶಿಷ್ಟ ಜಾತಿ ಒಳಮೀಸಲಾತಿ ವರ್ಗೀಕರಣ ಸಂಬಂಧ ನ್ಯಾಯಮೂರ್ತಿ ಹೆಚ್. ಎನ್, ನಾಗಮೋಹನದಾಸ್, ಏಕ ಸದಸ್ಯ ವಿಚಾರಣಾ ಆಯೋಗದಿಂದ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ 2025 ರ ಕಾರ್ಯಕ್ರಮಕ್ಕೆ ನಗರದ ಇಂದಿರಾ ನಗರ ಪ್ರದೇಶದಲ್ಲಿನ ಕುಂಟುಂಬದ ದತ್ತಾಂಶಗಳನ್ನು ಶೇಖರಿಸುವ ಮೂಲಕ ವಿಜಯನಗರ ಜಿಲ್ಲೆಯಲ್ಲಿ ಸಮೀಕ್ಷೆಗೆ ಸೋಮವಾರ ಚಾಲನೆ ನೀಡಿದರು.**

## ಮತ್ಸ್ಯ ಸಂಪದ ಯೋಜನೆಯಡಿ ಸಹಾಯಧನ : ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಮೀನುಗಾರಿಕೆ ಇಲಾಖೆಯಿಂದ 2024-25ನೇ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ವಿವಿಧ ಘಟಕಗಳಡಿ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ವಿವಿಧ ಘಟಕಗಳಾದ ಲವಣಯುಕ್ತ, ಸೌಳು ಅಥವಾ ಜೌಗು ಭೂಮಿಯುಳ್ಳ ಪ್ರದೇಶದಲ್ಲಿ ಕನಿಷ್ಠ 8 ರಿಂದ 10 ತಿಂಗಳವರೆಗೆ ನೀರು ನಿಲ್ಲುವ ಜಮೀನುಗಳಲ್ಲಿ ಹೊಸದಾಗಿ ಮೀನುಕೃಷಿ ನಿರ್ಮಾಣಕ್ಕೆ ಸಹಾಯಧನ, ಹೂಡಿಕೆ ವೆಚ್ಚಗಳಿಗೆ ಸಹಾಯಧನ (ಸಾಮಾನ್ಯ ವರ್ಗದ ಮೀನುಕೃಷಿಕರಿಗೆ) ಮತ್ತು ಹೊಸದಾಗಿ ಮೀನುಮರಿ ಪಾಲನಾ ಕೊಳಗಳ ನಿರ್ಮಾಣಕ್ಕಾಗಿ ಸಹಾಯಧನ (ಪರಿಶಿಷ್ಟ ಪಂಗಡ ವರ್ಗದ ಮೀನುಕೃಷಿಕರಿಗೆ) ನೀಡಲಾಗುತ್ತಿದೆ. ಆಸಕ್ತ ಮೀನುಗಾರರು ಕೊಪ್ಪಳ ಮೀನುಕಾರಿಕೆ ಸಹಾಯಕ ನಿರ್ದೇಶಕರ ಕಚೇರಿಗೆ ಮೇ 30 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 9148287937 ಗೆ ಸಂಪರ್ಕಿಸುವಂತೆ ಕೊಪ್ಪಳ ಮೀನುಕಾರಿಕೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಮೇ.10 ವಿಶ್ವಗುರು ಬಸವಣ್ಣ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯೋತ್ಸವ ಆಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಹೊಸಪೇಟೆ ವತಿಯಿಂದ ವಿಶ್ವಗುರು ಸಾಂಸ್ಕೃತಿಕ ನಾಯಕ ಬಸವಣ್ಣನವರು ಮತ್ತು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಜಯಂತ್ಯೋತ್ಸವನ್ನು ಮೇ.10 ರಂದು ಸಂಜೆ 6.30ಕ್ಕೆ, ನಗರದ ಬಸವೇಶ್ವರ ವೃತ್ತದಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಉದ್ಘಾಟಿಸಲಿದ್ದಾರೆ. ಶಾಸಕ ಹೆಚ್.ಆರ್.ಗವಿಯಪ್ಪ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಈ.ತುಕಾರಾಮ್, ಶಾಸಕರು, ನಗರಸಭೆ ಅಧ್ಯಕ್ಷ ಎನ್.ರೂಪೇಶ್ ಕುಮಾರ್, ಹುಡಾ ಅಧ್ಯಕ್ಷ ಹೆಚ್.ಎನ್.ಎಫ್.ಇಮಾಮ್ ನಿಯಾಜಿ ಭಾಗವಹಿಸಲಿದ್ದಾರೆ. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಒ ಎನ್.ಎಂ.ಅಲಿ ಅಕ್ರಮ್ ಷಾ, ಎಸ್ಪಿ ಶ್ರೀಹರಿಬಾಬು ಬಿ.ಎಲ್ ಉಪಸ್ಥಿತರಿರಲಿದ್ದಾರೆ. ಹಂಪಿಯ ಕನ್ನಡ ವಿವಿ ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಕೆ.ರವೀಂದ್ರನಾಥ ಉಪನ್ಯಾಸ ನೀಡಲಿದ್ದಾರೆ.

ಭವ್ಯ ಮೆರವಣಿಗೆ : ಅಂದು ಸಂಜೆ 4 ಗಂಟೆಗೆ ನಗರದ ಕೊಟ್ಟೂರುಸ್ವಾಮಿ ಮಠದಿಂದ ಬಸವೇಶ್ವರ ವೃತ್ತದವರೆಗೆ ಭವ್ಯ ಮೆರವಣಿಗೆ ನಡೆಯಲಿದೆ.

## ನಿರಕ್ಷರ ತಾಯಂದಿರಿಂದ ಹೊಸ ತಲೆಮಾರಿಗೆ ಜನಪದ ಸಂಸ್ಕೃತಿ

### ಪ್ರಾಂಶುಪಾಲ ಡಾ.ಕೆ.ಸತೀಶ್ ಹೇಳಿಕೆ | ಜಾನಪದ ಆಚರಣೆಗಳ ಅರಿವು ಮೂಡಿಸುವ ಜಾನಪದ ಉತ್ಸವ

**ಹಂಪಿ ಟೈಮ್ಸ್ ಹರಪನಹಳ್ಳಿ**

ಕರ್ನಾಟಕ ಪ್ರಾಚೀನ ಕಾಲದಿಂದಲೂ ಇಲ್ಲಿನ ಜನರು ಜನಪದ ಸಂಸ್ಕೃತಿಯನ್ನು ತಲೆಮಾರಿನಿಂದ ತಲೆಮಾರಿಗೆ ಹೊತ್ತು ತಂದಿದ್ದಾರೆ ಎಂದು ಪ್ರಾಂಶುಪಾಲ ಡಾ.ಕೆ.ಸತೀಶ್ ಹೇಳಿದರು.

ಕರ್ನಾಟಕ ಸರಕಾರ, ಕಾಲೇಜು ಶಿಕ್ಷಣ ಇಲಾಖೆಯ ಆದೇಶದಂತೆ ಸರಕಾರಿ ಪ್ರಥಮ ದರ್ಜೆ ಕಾಲೇಜು ಹರಪನಹಳ್ಳಿಯಲ್ಲಿ ಜಾನಪದ ಉತ್ಸವ 2025 ಕಾರ್ಯಕ್ರಮವನ್ನು ಮಂಗಳವಾರ ಬೆಳಿಗ್ಗೆ ಉದ್ಘಾಟಿಸಿ ಮಾತನಾಡಿದರು. ನಿರಕ್ಷರ ತಾಯಂದಿರು ಸಹ ಅಹೋರಾತ್ರಿ ಹಾಡಬಲ್ಲ ಜನಪದ ಕಾವ್ಯಗಳನ್ನು ರಚಿಸಿದ ಸಂಸ್ಕೃತಿ ನಮ್ಮದು. ಅದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಯುವ ಪೀಳಿಗೆಯದ್ದಾಗಿದೆ ಎಂದರು.




ಸಾಂಸ್ಕೃತಿಕ ಘಟಕದ ಸಂಚಾಲಕ ಸಹ ಪ್ರಾಧ್ಯಾಪಕ ಡಾ.ಹಾರಾಳು ಬುಳ್ಳಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಜಾಗತಿಕ ತಂತ್ರಜ್ಞಾನ ಯುಗದಲ್ಲಿ ಮಾನಸಿಕ ನೆಮ್ಮದಿ ಹಾಗೂ ಸಂತೋಷಕ್ಕಾಗಿ ಜಾನಪದ ಕಲೆಗಳ, ತಿಳುವಳಿಕೆ, ಅಳವಡಿಕೆ ಮತ್ತು ಪರಿಚಯಕ್ಕಾಗಿ ಮತ್ತು ಹಳ್ಳಿಗಾಡಿನ ಯುವ ಸಮುದಾಯ ಸಂತೋಷಕ್ಕಾಗಿ, ಕೆಟ್ಟ ಅಭ್ಯಾಸಗಳಿಂದ ದೂರ ವಿರಲು ಇಂತಹ ಕಾರ್ಯಕ್ರಮಗಳನ್ನು ಆಚರಣೆ ಅರ್ಥಪೂರ್ಣ ಎಂದು ತಿಳಿಸಿದರು.

ಪ್ರೊ.ನಾಗರಾಜ್ ಮಾತನಾಡಿ, ಕರ್ನಾಟಕ ರಾಜ್ಯವು ತನ್ನದೇ ಆದ ವಿಶೀಷ್ಟ ಸಂಪ್ರದಾಯಗಳು, ಹಬ್ಬಗಳು ಸೇರಿದಂತೆ ಆನೇಕ ಪದ್ಧತಿಯ ಸಂಪ್ರಾದಯಗಳನ್ನು ಹೊಂದಿದೆ. ಕಾಲೇಜುಗಳಲ್ಲಿ ಸಂಪ್ರಾದಯ ಉತ್ಸವಗಳು ವಿದ್ಯಾರ್ಥಿಗಳಿಗೆ ಸಾರ್ವಜನಿಕರಿಗೆ ಜಾನಪದ ಕಲೆ, ಉಡುಗೆ, ತೊಡುಗೆ, ಅಡುಗೆ, ನೃತ್ಯ, ಕಲಾ ಪ್ರಕರಗಳನ್ನು ತಿಳಿಯಲು ಹಾಗೂ ವಿದ್ಯಾರ್ಥಿಗಳಿಗೆ ಪುನರ್ ಜ್ಜೀವನಗೊಳಿಸಲು ನೇರವಾಗುತ್ತವೆ ಎಂದರು.

ಕಾರ್ಯಕ್ರಮದ ನಂತರ ಕಾಲೇಜು ವಿದ್ಯಾರ್ಥಿಗಳಿಂದ ಲಂಬಾಣಿ ನೃತ್ಯ ಕೋಲಾಟ ನೃತ್ಯ ಜಾನಪದ ಶೈಲಿಯ ವಿವಿಧ ನೃತ್ಯಗಳನ್ನು ಹಾಗೂ ಜಾನಪದ ಹಾಡುಗಳನ್ನು ವಿದ್ಯಾರ್ಥಿಗಳು ಪ್ರಸ್ತುತಪಡಿಸಿದರು. ಈ ಮೂಲಕ ಬಯಲು ಸೀಮೆಯ ನಾಡಾದ ಹರಪನಹಳ್ಳಿಯಲ್ಲಿ ಜಾನಪದ ಉತ್ಸವವನ್ನು ಎತ್ತಿನ ಬಂಡಿಯಲ್ಲಿ ಅಗಮಿಸಿ ಅದ್ದೂರಿಯಾಗಿ ಆಚರಿಸಲಾಯಿತು.

ಪಟ್ಟಣದಲ್ಲಿ ಪ್ರವಾಸಿ ಮಂದಿರ ವೃತ್ತದಿಂದ ಜಾನಪದ ಉತ್ಸವ 2025 ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

ಈ ಮೆರವಣಿಗೆಯಲ್ಲಿ ಪಾಲ್ಗೊಂಡು ಜಾನಪದ ಆಚರಣೆಗಳ ಕುರಿತು ಅರಿವು ಮೂಡಿಸಲಾಯಿತು. ಕಾಲೇಜಿನ ಸಭಾಂಗಣದಲ್ಲಿಜರುಗಿದ ಸಭಾ ಕಾರ್ಯಕ್ರಮದಲ್ಲಿ ಕುಮಾರಿ ಪಲ್ಲವಿ ಪ್ರಾರ್ಥಿಸಿದರು. ಹುಚ್ಚರಾಯಪ್ಪ ಸ್ವಾಗತಿಸಿದರು.

ಪ್ರೊ.ನಾಗರಾಜ್, ಡಾ.ಎಂ.ಸುರೇಶ್, ಕೊಟ್ರೇಶಿ.ಹೆಚ್, ಕಲ್ಲಪ್ಪ, ಎನ್‌ರಾಜಪ್ಪ, ಡಾ.ನಾಗಪ್ಪ ಮುಂತಾದ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಭಾಗವಹಿಸಿದ್ದರು.

## ಹಂಪಿ ತುಂಗಭದ್ರಾ ನದಿ ದಡದಲ್ಲಿ ಬುಡಕಟ್ಟು ಜನಾಂಗದಿಂದ ಗಂಗಾಪೂಜೆ



ಹಂಪಿಯಲ್ಲಿ ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ಗಡಿಭಾಗದ ಚಿಕ್ಕೋಬನಹಳ್ಳಿ, ತಾಲೂಕಿನ ಗಡಿಭಾಗದ ಹುಡೇಂ ಗ್ರಾಮದ ಬುಡಕಟ್ಟು ಜನಾಂಗ ಸೇರಿದಂತೆ ಶ್ರೀ ಕಂಚೋಬಳೇಶ್ವರ ಸ್ವಾಮಿ ದೇವರ ಪೆಟ್ಟಿಗೆಗಳನ್ನು ಮಂಗಳವಾರ ಬೆಳಿಗ್ಗೆ ತುಂಗಭದ್ರಾ ನದಿಯ ದಡದಲ್ಲಿ ಪೂಜಾರಿ, ಭಕ್ತರು, ದಾಸರಯ್ಯಗಳೊಂದಿಗೆ ಗಂಗೆ ಪೂಜೆ ನೆರವೇರಿಸಿ, ಸಂಪ್ರದಾಯದಂತೆ ಸ್ವಗ್ರಾಮಗಳಿಗೆ ಪಾದಯಾತ್ರೆ ಮೂಲಕ ಮರಳಿದರು.

# ಕನ್ನಡದ ಮಹತ್ವದ ಕೃತಿಗಳು ವಿಶ್ವದ ಭಾಷೆಗಳಿಗೆ ಭಾಷಾಂತರಕ್ಕೆ ಸಂಪೂರ್ಣ ಸಹಕಾರ: ಸಿ.ಎಂ.ಸಿದ್ದರಾಮಯ್ಯ



■ ಹಂಪಿ ಟೈಮ್ಸ್ ಬೆಂಗಳೂರು

ಕನ್ನಡದ ಮಹತ್ವದ ಕೃತಿಗಳು ಇಂಗ್ಲಿಷ್ ಸೇರಿ ವಿಶ್ವದ ಭಾಷೆಗಳಿಗೆ ಭಾಷಾಂತರಗೊಳ್ಳಲು ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕಮಲಾ ಹಂಪನಾ ಸಾಹಿತ್ಯ ವೇದಿಕೆ ಮತ್ತು ಕರ್ನಾಟಕ ಚಿತ್ರಕಲಾ ಪರಿಷತ್ ಸಹಯೋಗದಲ್ಲಿ ಚಿತ್ರಕಲಾ ಪರಿಷತ್ ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ "ಹಂಪನಾ ಅವರ " ಚಾರು ವಸಂತ" ದೇಸೀಕಾವ್ಯದ ಪರ್ಷಿಯನ್ ಭಾಷಾ ಕೃತಿಯನ್ನು ಜನಾರ್ಪಣೆಗೊಳಿಸಿ ಮಾತನಾಡಿದರು. ಹಂಪನಾ ಕನ್ನಡ ನೆಲದ ಶ್ರೇಷ್ಠ ಸಾಂಸ್ಕೃತಿಕ ವ್ಯಕ್ತಿತ್ವ. ಇವರು ರಚಿಸಿರುವ "ಚಾರು ವಸಂತ" ವಿಶೇಷ ಕೃತಿಯಾಗಿದೆ. ಇಲ್ಲಿಯವರೆಗೆ 16 ಭಾಷೆಗಳಿಗೆ ತರ್ಜುಮೆ ಆಗಿ, ಈಗ 17ನೇ ಭಾಷೆಯಾಗಿ ಪರ್ಷಿಯನ್ ಗೆ ಅನುವಾದಗೊಂಡಿರುವುದು ಕನ್ನಡದ ಹೆಮ್ಮೆ. ಕನ್ನಡ ವಿಶ್ವದ ಎಲ್ಲಾ ಭಾಷೆಗಳಿಗೆ ಅನುವಾದಗೊಂಡರೆ ಕನ್ನಡದ ಬೆಳವಣಿಗೆಗೆ ಕಾರಣವಾಗುತ್ತದೆ ಎಂದರು.

ಹಂಪನಾ ಅವರ ಚಾರು ವಸಂತ ಕಾವ್ಯ , ನಾಟಕವಾಗಿ ಕೂಡ ಜನಮನ್ನಣೆ ಗಳಿಸಿದೆ. ಹಂಪನಾ ದಂಪತಿ ನನಗೆ ಬಹಳ ವರ್ಷಗಳಿಂದ ಆತ್ಮೀಯರಾಗಿದ್ದರು. ನಾನು ಸಾಹಿತಿ ಅಲ್ಲ. ಆದರೆ, ಸಾಹಿತ್ಯ ಮತ್ತು ಸಾಹಿತಿಗಳ ಒಡನಾಟ ಇದೆ. ಕನ್ನಡ ಕಾವಲು ಸಮಿತಿಯ ಮೊದಲ ಅಧ್ಯಕ್ಷನಾದ ಬಳಿಕ ನಾನು ಕೇಂದ್ರ ಸರ್ಕಾರಕ್ಕೆ ಬರೆಯುವ ಪತ್ರಗಳ ಹೊರತಾಗಿ ಬೇರೆ ಕಡೆ ಇಂಗ್ಲಿಷ್ ಬಳಸುವುದೇ ಇಲ್ಲ. ಹೀಗಾಗಿ ನನಗೆ ಇಂಗ್ಲಿಷ್ ಹೆಚ್ಚು ಬರದಂತಾಯಿತು. ಮಲ ಹೊರುವ ಪದ್ಧತಿ ಬಗ್ಗೆ ಇರುವ ಕೃತಿ ಇದಾಗಿದೆ. ಜಾತಿ ವ್ಯವಸ್ಥೆ ರೂಪಿಸಿದ ಶಾಪ ಅಸ್ಪೃಶ್ಯತೆ. ಇದು ಅಳಿಯಬೇಕು. ಸಾಮಾಜಿಕ, ಆರ್ಥಿಕ ಶಕ್ತಿ ಎಲ್ಲರಿಗೂ ಸಿಕ್ಕಾಗ ಮಾತ್ರ ಚಲನೆ ಇಲ್ಲದ ಜಾತಿ ವ್ಯವಸ್ಥೆ ಅಳಿಯಲು ಸಾಧ್ಯ. ಚಾರು ವಸಂತ ಅದ್ಭುತವಾದ ಕಾವ್ಯ. ಕನ್ನಡ ಭಾಷೆಯ ಉಳಿವು, ಬೆಳವಣಿಗೆಗೆ ಇಂತಹ ಕೃತಿಗಳು ಬರಬೇಕು ಎಂದರು.

## ನಿಮ್ಮ ಬೆಂಬಲವೇ ಪತ್ರಿಕೆಯ ಸ್ವತಂತ್ರತೆಗೆ ಬಲ

ಮುದ್ರಣ ಮಾಧ್ಯಮವು ಸಮಾಜದಲ್ಲಿ ಅರಿವು, ಚಿಂತನೆ ಮತ್ತು ಪ್ರಜ್ಞೆ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ನಾವು ನಿಮಗಾಗಿ ಪ್ರತಿದಿನದ ನಿಖರ ಮತ್ತು ನಿಸ್ಪಕ್ಷಪಾತ ವರದಿ ಮತ್ತು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮೌಲ್ಯಯುತ ಲೇಖನಗಳನ್ನು ಹಂಚಿಕೊಳ್ಳುತ್ತಿದ್ದೇವೆ. ಮುದ್ರಣ ಮಾಧ್ಯಮದ ಉಳಿವು ಒಂದು ಸಾಮೂಹಿಕ ಜವಾಬ್ದಾರಿಯಾಗಿದೆ. ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆಯನ್ನು ಅಭಿವೃದ್ಧಿಪಡಿಸಬೇಕಾದರೆ, ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕೈಜೋಡಿಸಬೇಕಿದೆ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಫೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂ ನಿರೀಕ್ಷಿಸಲಾಗದು. ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ನಿಮ್ಮ ಬೆಂಬಲವೇ ನಮ್ಮ ಕಾಯಕಕ್ಕೆ ಬಲ.

**ಹಂಪಿ ಟೈಮ್ಸ್, ಹೊಸಪೇಟೆ : ಮೊ: 9448633038**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ಬಂಡವಾಳ ಕೇಂದ್ರಿತ ಅಭಿವೃದ್ಧಿ ಮೋಹದಲ್ಲಿ ಕೃಷಿ ಪರಂಪರೆ ಬೆತ್ತಲಾಗಿಸಿದ ರಾಜಕೀಯ

### ಕೃಷಿಯೊಂದಿಗೆ ಸ್ವಾವಲಂಬಿಯಾಗಿದ್ದ ಮನುಷ್ಯನನ್ನು ಕೈಗಾರಿಕೆಯ ಕಡೆಗೆ ಪ್ರವೇಶಿಸುವಂತೆ ಮಾಡಿ ಪರಾವಲಂಬಿಯನ್ನಾಗಿಸಿದ ಪ್ರಭುತ್ವ ಕೈಗಾರಿಕಾ, ಆಡಳಿತಾತ್ಮಾಕ ಮೀಮಾಂಸೆಯ ಜ್ಞಾನ ಪಠ್ಯ ಪ್ರವೇಶ । ತಾಂತ್ರಿಕ ಜ್ಞಾನದ ಮೋಹದಲ್ಲಿ ಮುಳುಗಿಸಿ ಕೃಷಿ ಮರೆತ ವ್ಯವಸ್ಥೆ



ಭಾರತವನ್ನು ಕೃಷಿ ಪ್ರಧಾನ ರಾಷ್ಟ್ರವೆಂದು, ರೈತರನ್ನು ದೇಶದ ಆಸ್ತಿ ಎಂದು ಕರೆಯುತ್ತಿದ್ದೇವೆ ಜೊತೆಗೆ ಕೃಷಿಯ ಬದುಕು ಸುಖ ನೀಡುವುದಿಲ್ಲ. ಬೆಳೆದ ಬೆಳೆಗೆ ಬೆಲೆಯಿಲ್ಲ. ಕೃಷಿ ಭೂಮಿಯಲ್ಲಿ ದುಡಿಯುವುದಕ್ಕೆ ಕೂಲಿಯ ಆಳುಗಳಿಲ್ಲ, ವಿದೇಶಿ ಮಾರುಕಟ್ಟೆಗಳಲ್ಲಿ ಬೇಡಿಕೆ ಮತ್ತು ಬೆಲೆಗಳು ಇದ್ದರೂ ಅದು ರೈತನ ಕೈಯನ್ನು ಸೇರುವುದಿಲ್ಲ ಅಂಬೋ ಬಲವಾದ ಕೂಗು ಕೃಷಿ ವಲಯದಿಂದ ಕೇಳಿ ಬರುತ್ತಿದೆ.

ರೈತರ ಆತ್ಮಹತ್ಯೆ, ವಲಸೆ, ಬರಗಳ ನಡುವೆ ಕೈಗಾರಿಕೆಯ ಬೆಳವಣಿಗೆಯೇ ದೇಶದ ಅಭಿವೃದ್ಧಿ ಎಂಬ ವಿಜೃಂಭಣೆಯು ಈ ಕೂಗಿಗೆ ಬೆಂಬಲವೆಂಬಂತೆ ನಿಂತಿದೆ. ಸರ್ಕಾರಗಳು ಬೆಂಬಲ ಬೆಲೆ, ಸಾಲಮನ್ನಾ, ಕೃಷಿ ಮಾರುಕಟ್ಟೆಯ ವಿಸ್ತರಣೆ ಇತ್ಯಾದಿ ಯೋಜನೆಗಳನ್ನು ರೂಪಿಸುತ್ತಿದ್ದರು. ಕೃಷಿ ತನ್ನ ಅಸ್ಥಿತ್ವವನ್ನು ಕಳೆದುಕೊಳ್ಳುವ ಅಂಚಿನಲ್ಲಿದೆ ಎಂಬುವುದು ನಮ್ಮ ಮುಂದಿರುವ ಸತ್ಯ. ಕೃಷಿಯು ತನ್ನ ಸತ್ವವನ್ನು ಕಳೆದುಕೊಳ್ಳಲು ಪ್ರಭುತ್ವದ ಕೈಗಾರಿಕಾ ಪ್ರಧಾನ ಧೋರಣೆ ಮತ್ತು ಒಲವುಗಳೇ ಕಾರಣವಾಗಿದೆ.

ಕೃಷಿಯನ್ನು ಮನುಷ್ಯ ತನ್ನ ಬದುಕಿನ ಭಾಗವಾಗಿಸಿಕೊಂಡ ಮೇಲೆ ಅವನು ಪರಿಪೂರ್ಣ ಮನುಷ್ಯನಾದ. ಕೃಷಿ ಚಟುವಟಿಕೆಯು ಆಹಾರ ವನ್ನು ಒದಗಿಸಿದ್ದಲ್ಲದೆ ಜೀವನ ಕ್ರಮವನ್ನು, ಜ್ಞಾನ ಪರಂಪರೆಯನ್ನು ಹುಟ್ಟು ಹಾಕಿತು. ಇದನ್ನೇ ಚಿಂತಕರು ಸಂಸ್ಕೃತಿ ಎಂದರು. ಕೃಷಿ ಮತ್ತು ಮನುಷ್ಯನ ಸಂಬಂಧ ಪ್ರಾಚೀನವಾದದ್ದು. ಈ ಕೃಷಿಯೊಂದಿಗೆ ಹುಟ್ಟು, ಸಾವು, ನೋವು, ನಲಿವು ಸಂಕಟ, ದೈವ, ನಂಬಿಕೆ, ಆಚರಣೆ, ಹಾಡು, ಹಬ್ಬಗಳು ಜೀವ ಪಡೆದವಲ್ಲದೆ ಮನುಷ್ಯನನ್ನು ಸ್ವಾವಲಂಬಿ ಯಾಗಿ, ಚೈತನ್ಯಶೀಲನಾಗಿ ಬದುಕಿಸಿದ್ದವು. ಸಾಮ್ರಾಜ್ಯಗಳು ಮೆರೆ ಯಲು, ನಗರ, ಕಟ್ಟಡಗಳು ಜೀವ ಪಡೆಯಲು. ದೇವಸ್ಥಾನ, ದೇವರು, ದೈವಗಳು ಇರುವಿಕೆಯ ಲೋಕವನ್ನು ಪಡೆಯಲು ತೆರೆಯ ಮರೆಯಲ್ಲಿ ಅಡಿಪಾಯವಾಗಿದ್ದದ್ದು ಕೃಷಿ ಮತ್ತು ಕೃಷಿಕರು. ಕೃಷಿಯ ಬಗೆಗಿನ ಜ್ಞಾನ ಪರಂಪರೆಯು ವಂಶಪರಂಪರೆಯ ನೆಲೆಯಿಂದ ರಕ್ತಗತವಾಗಿತ್ತಲ್ಲದೆ. ಪ್ರಾಚೀನ ಶಿಕ್ಷಣವು ಇದನ್ನು ಉಳಿಸಿಕೊಂಡು ನಡೆಸಿಕೊಂಡು ಬಂದಿತ್ತು. ಆದರೆ ಮಧ್ಯಕಾಲೀನ ವಿದೇಶಿಯ ದಾಳಿಗಳು ಮತ್ತು ಆಧುನಿಕ ವಸಾಹತುಶಾಹಿಯ ಪ್ರವೇಶವು ಕೃಷಿಯ ಜೊತೆಗಿದ್ದ ಮಾನವನ ಸಂಬಂಧವನ್ನು ಪಲ್ಲಟಿಸಿತು. 1854ರಲ್ಲಿ ಆಂಗ್ಲ ಮಾದರಿಯ ಶಿಕ್ಷಣವು ನಮ್ಮ ದೇಶದಲ್ಲಿ ಕೈಗಾರಿಕಾ ಮತ್ತು ಆಡಳಿತಾತ್ಮಾಕ ಮೀಮಾಂಸೆಗೆ ಸಂಬಂಧಿಸಿದ ಜ್ಞಾನವು ಪಠ್ಯದ ಮೂಲಕ ನಮ್ಮ ನೆಲವನ್ನು ಪ್ರವೇಶ ಪಡೆಯಿತು. ಈ ಪ್ರವೇಶವೇ ನಮ್ಮ ಶಿಕ್ಷಣ ಮಾದರಿಯನ್ನು, ಕೃಷಿಯನ್ನು ಅದರ ಉತ್ಪನ್ನವನ್ನು ಹಾಗೂ ಆಚಾರ, ನಂಬಿಕೆ, ದೇವರು, ದೈವ, ಜೀವನ ಮೀಮಾಂಸೆಯನ್ನು ಕೀಳೆಂದು, ಐತಿಹ್ಯವೆಂದು, ಪುರಾಣವೆಂದು ಕೃಷಿಯ ಸ್ಥಾನವನ್ನು ಕುಗ್ಗಿಸಿ, ಪಲ್ಲಟಿಸುವಂತೆ ಮಾಡಿತಲ್ಲದೆ ವಿಜ್ಞಾನ ಮತ್ತು ಕೈಗಾರಿಕಾ ಜ್ಞಾನಪರಂಪರೆಯನ್ನು ಅಭಿವೃದ್ಧಿಯ ಸಾಧನಗಳೆಂದು, ಜ್ಞಾನಧಾರೆಗಳೆಂದು ಪ್ರಭುತ್ವದ ನೆಲೆಯಲ್ಲಿ ಪರಿಚಯಿಸುವ ಮೂಲಕ ಕೃಷಿಯೊಂದಿಗೆ ಸ್ವಾವಲಂಬಿಯಾಗಿದ್ದ ಮನುಷ್ಯನನ್ನು ಕೈಗಾರಿಕೆಯ ಕಡೆಗೆ ಪ್ರವೇಶಿಸುವಂತೆ ಮಾಡಿ ಪರಾವಲಂಬಿಯನ್ನಾಗಿಸಿತು.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper


ಮನುಷ್ಯನೊಂದಿಗೆ ಗೌರವದ ಧಾರೆಯಲ್ಲಿ ಸಂಬಂಧವನ್ನು ಪಡೆದುಕೊಂಡಿದ್ದ ಕೃಷಿ ಪರಿಕರಗಳಾದ ನೇಗಿಲು, ನೊಗ, ಕುಂಟೆ, ಕೂರಿಗೆ, ತಟ್ಟಿ, ಬಟ್ಟಿ, ಕತ್ತಿ, ಹಾರೆ, ಕುಂಟಾಣಿ, ಪಿಕ್ಕಾಸಿ, ಮುಟ್ಟಾಳೆ, ಸೇರು, ಪಾವು, ಏಣಿ, ದೋಣಿ, ಏತ, ಒನಕೆ ಮತ್ತು ಬಿತ್ತನೆ ಬೀಜಗಳು ನಿಧಾನಕ್ಕೆ ತನ್ನ ಅಸ್ಥಿತ್ವವನ್ನು ಕಳೆದುಕೊಂಡು ಅನಾಥವಾಗಿ ಬೆಂಕಿ ಮತ್ತು ಗೆದ್ದಲುವಿನ ಆಹಾರವಾದವು. ಇವುಗಳ ಸ್ಥಾನವನ್ನು ಕೈಗಾರಿಕಾ ಯಂತ್ರ-ಉಪಕರಣಗಳು ಆಧುನಿಕ ಕೃಷಿ ಪದ್ಧತಿಯ ಭಾಗವಾಗಿ ತುಂಬಿದವು. ಸ್ವಾತಂತ್ರ್ಯ ಭಾರತದ ನಂತರ ಕೃಷಿಯನ್ನು ಕೈಗಾರಿಕೆಯ ಅಡಿಯಾಳಾಗಿಸುವ ಕಾರ್ಯ ತೀವ್ರವಾಗಿ ನಡೆಯಿತು. ಸರ್ಕಾರಗಳು ಹಸಿರು ಕ್ರಾಂತಿ, ಹಳದಿಕ್ರಾಂತಿ, ನೀಲಿಕ್ರಾಂತಿ, ಶ್ವೇತಕ್ರಾಂತಿಯೆಂಬ ಪರಿಕಲ್ಪನೆಯ ಮೂಲಕ ಬಂಡವಾಳ ಕೇಂದ್ರಿತ ಅಭಿವೃದ್ಧಿಯ ಬೀಜವನ್ನು ರೈತರ ಹೆಗಲಿಗಿಟ್ಟು ಬಿತ್ತಿದರು. ಹಾಗೂ ವಿಷಗೊಬ್ಬರ, ರಿಯಾಯಿತಿ, ಕೃಷಿಮಾರುಕಟ್ಟೆ, ಜಾಗತೀಕರಣದಂತಹ ಅಸ್ತ್ರವನ್ನು ರೈತರ ಮೇಲೆ ಪ್ರಯೋಗಿಸಿ ಕೃಷಿಯನ್ನು, ಕೃಷಿಯ ಪರಂಪರೆಯನ್ನು ಬೆತ್ತಲಾಗಿಸಿ ಬಯಲಿನಲ್ಲಿ ನಿಲ್ಲಿಸಿ. ಕೃಷಿಯ ಮಾನ ಉಳಿಸಲು ಕೈಗಾರಿಕೆಗಳಿಗೆ ಗುತ್ತಿಗೆ ನೀಡಿರುವುದು ಬಹುತೇಕ ಸರ್ಕಾರಗಳ ಸಾಧನೆಯಾಗಿದೆ.

ನಮ್ಮ ಶಿಕ್ಷಣದ ಪಠ್ಯಗಳು ಇಂದು ಕೃಷಿ ಜ್ಞಾನ ಪರಂಪರೆಯನ್ನು ಜ್ಞಾನವೆಂದು ಒಪ್ಪಿಕೊಳ್ಳದೆ ದೂರವಿಟ್ಟು. ಬಂಡವಾಳ ಕೇಂದ್ರಿತ ಮತ್ತು ಆಡಳಿತ ಕೇಂದ್ರಿತ ಜ್ಞಾನವನ್ನು ಅಪ್ಪಿಕೊಂಡವು. ಈ ಪರಿಣಾಮದಿಂದ ನಾವು ವಿಜ್ಞಾನವನ್ನು, ತಾಂತ್ರಿಕವಾದ ಜ್ಞಾನವನ್ನು, ಗಣಿತವನ್ನು, ವೈದ್ಯಕೀಯವನ್ನು ಉನ್ನತ ಜ್ಞಾನ ಮೀಮಾಂಸೆಗಳೆಂದು ಓದುತ್ತಿದ್ದೇವೆ. ಈ ರೀತಿಯ ಶಿಕ್ಷಣ ಪ್ರಜ್ಞೆಯು ನಮ್ಮನ್ನು ಯಾಂತ್ರಿಕವಾದ ಸತ್ವರಹಿತ ಜೀವಿಯಾಗಿ ಮಾಡಿದೆ. ಇಂದು ಶಿಕ್ಷಣದ ಮೂಲಕ ಪದವಿ ಪಡೆದ ವ್ಯಕ್ತಿಗಳಿಗೆ ಕೃಷಿ ಮತ್ತು ಅದರ ಪರಿಸರವು ಯಾವ ಆಕರ್ಷಣೆಯನ್ನು ಮೂಡಿಸುತ್ತಿಲ್ಲ ಮತ್ತು ಕೃಷಿ ಕ್ಷೇತ್ರಕ್ಕೆ ತನ್ನನ್ನು ಒಳಗೊಳ್ಳುವಂತೆಯು ಮಾಡುತ್ತಿಲ್ಲ. ಕಾರಣ ಕೃಷಿ ಪರಂಪರೆಗೆ ಸಂಬಂಧಿಸಿದ ಜೀವನ ವಿಧಾನವನ್ನು ಮತ್ತು ಕೃಷಿ ಮೀಮಾಂಸೆಯನ್ನು ಪಠ್ಯದ ಭಾಗವಾಗಿ ಮಗುವಿಗೆ ಕಲಿಸುತ್ತಿಲ್ಲ. ಹೀಗಿರುವ ಪರಿಸ್ಥಿಯಲ್ಲಿ ಸರ್ಕಾರಗಳು ರೈತರನ್ನು ಅವರ ಬದುಕನ್ನು ಕಟ್ಟಲು ಸಾಲಮನ್ನಾ ಇತರೆ ಕೃಷಿ ಸಂಬಂಧಿತ ಯೋಜನೆಯನ್ನು ರೂಪಿಸಿ ರೈತರ ಅಭಿವೃದ್ಧಿ ಮಾಡಿದ್ದೇವೆ ಎನ್ನುವ ಮೊದಲು ಕೃಷಿ ಪರಂಪರೆಯನ್ನು ಶಿಕ್ಷಣದ ಭಾಗವಾಗಿಸಿ ಕಲಿಸುವ ಮೂಲಕ ಕೈಗಾರಿಕಾ ಗುಲಾಮಗಿರಿ ಯಿಂದ ಮುಕ್ತವಾಗಿಸಿದಾಗ ನಮ್ಮ ಜೀವಂತಿಗೆಯ ಹೆಜ್ಜೆಗಳು ಕೃಷಿ ಸಂಸ್ಕೃತಿಯೊಂದಿಗೆ ಜನ್ಮ ಪಡೆಯಬಹುದು ಮತ್ತು ಅನ್ನ, ಅಕ್ಷರಗಳು ನಮ್ಮೊಂದಿಗೆ ಅಪ್ಪಿಕೊಳ್ಳಬಹುದು. ■

# ಇಳಿ ವಯಸ್ಸಿನಲ್ಲಿ ಬತ್ತದಿರಲಿ ಜೀವನೋತ್ಸಹ

### ನಮ್ಮದೇ ನಡೆಯಲಿ, ಮನೆಯಲ್ಲಿ ನನ್ನ ಮಾತೇ ನಡೆಯಬೇಕು ಎಂಬ ಹಮ್ಮು ಬಿಮ್ಮುಗಳೆಲ್ಲಾ ಅಳಿಯಲಿ

■ ಚೇತನ ಭಾರ್ಗವ, ಬೆಂಗಳೂರು



ಪ್ರತಿಯೊಬ್ಬರು ಬದುಕಿನಲ್ಲಿ ಬಾಲ್ಯ ಯವ್ವನ ಮುಪ್ಪು ಈ ಮೂರು ಹಂತವನ್ನು ಅನುಭವಿಸುತ್ತಾರೆ. ವಯಸ್ಸು ಆಗುವುದು ಬರಿ ದೇಹಕ್ಕೆ ಮನಸ್ಸಿಗಲ್ಲ. ಮನಸ್ಸಿಗೆ ಮುಪ್ಪು ಆವರಿಸುವುದೇ ಇಲ್ಲ. ಮನಸ್ಸು ಸದಾ ಚಿರ ಯವ್ವನದಲ್ಲೇ ಇರಬೇಕು. ಆಗ ಜೀವನದಲ್ಲಿ ಉತ್ಸಾಹವಿರುತ್ತದೆ. ನಾವು ಇಳಿ ವಯಸ್ಸು ಎಂದರೆ ಜೀವನದ ಕೊನೆಯ ಹಂತ ಎಂದು ಭಾವಿಸುತ್ತೇವೆ. ಅದು ತಪ್ಪು, ಈ ಹಂತದಲ್ಲಿ ಜೀವನದ ಎಲ್ಲಾ ಜವಾಬ್ದಾರಿಗಳು ಕಳೆದು ನಿರಾಳರಾಗಿರುತ್ತೇವೆ. ಆಗ ಹೊಸ ಅನುಭವ ಉತ್ಸಾಹದ ಅನಾವರಣವಾಗುತ್ತದೆ. ಕೆಲಸದ ಒತ್ತಡದಲ್ಲಿ ಬದುಕಿನ ಜಂಜಾಟದಲ್ಲಿ ನಮ್ಮ ಹವ್ಯಾಸ ಮತ್ತು ನಮ್ಮೊಳಗೆ ಅಡಗಿರುವ ವಿಶಿಷ್ಟ ಪ್ರತಿಭೆಗಳನ್ನು ಮರೆತಿರುತ್ತೇವೆ. ಅವುಗಳ ಬಗ್ಗೆ ಗಮನಹರಿಸಿದರೆ ಮುಪ್ಪಿನಲ್ಲಿ ಜೀವನ ಉತ್ಸಾಹ ಹೆಚ್ಚಾಗುತ್ತದೆ.

ಈ ಹಂತದಲ್ಲಿ ಶಾರೀರಿಕವಾಗಿ ಕುಗ್ಗಿದರೂ ಮಾನಸಿಕವಾಗಿ ಉತ್ಸಾಹವನ್ನು ಲವಲವಿಕೆಯನ್ನು ಕಾಪಾಡಿಕೊಂಡರೆ ಜೀವನದ ಉತ್ತರಾರ್ಧದ ಈ ಸಮಯ ಅರ್ಥಪೂರ್ಣವಾಗುತ್ತದೆ. ಕೆಲಸ, ಮನೆ, ಮಕ್ಕಳು, ಸಂಸಾರ ಹೀಗೆ ಹಲವು ಜಂಜಾಟಗಳಲ್ಲಿ ಕಳೆದ ಬದುಕು ನಿವೃತ್ತಿಯಾದ ಮೇಲೆ ಮಕ್ಕಳೆಲ್ಲ ಬೆಳೆದು ಮದುವೆಯಾಗಿ ಒಂದು ಹಂತಕ್ಕೆ ಬಂದಿರುವ ಈ ವೇಳೆಯಲ್ಲಿ ತಮ್ಮ ಆತ್ಮಾವಲೋಕನ ಮಾಡಿ ಸಮಯದ ಸದುಪಯೋಗ ಪಡೆದುಕೊಳ್ಳುವುದು ಮುಖ್ಯವಾಗುತ್ತದೆ.



ಮುಂಜಾನೆಯ ದಿನಾಚರಣೆ ಶಿಸ್ತುಬದ್ಧ ಆಹಾರ ಕ್ರಮ, ಹಿತಮಿತವಾದ ವ್ಯಾಯಾಮ, ವಿಶ್ರಾಂತಿ, ನಿಯತ ಓದು, ಸಂಗೀತ ಹಾಗೂ ಕುಟುಂಬದವರೊಂದಿಗೆ ಕೊಡ ಮಾಡುವ ಸಮಯ, ಇಳಿ ವಯಸ್ಸಿನಲ್ಲಿ ದೈಹಿಕ ಮಾನಸಿಕ ಆರೋಗ್ಯಕ್ಕೆ ಅತ್ಯಗತ್ಯ. ಸಮಯ ಹೇಗೆ ಕಳೆಯುವುದೆಂದು ಸೋಮಾರಿಯಾಗದೆ, ಅತಿಯಾದ ಚಟುವಟಿಕೆಗಳಲ್ಲಿ ತೊಡಗಿ ಆಯಾಸಗೊಳ್ಳದೆ, ತೀರಾ ವಾಚಾಳಿಯಾಗದೆ, ಮೊಮ್ಮಕ್ಕಳ ಆಟ ಪಾಠ, ಮಕ್ಕಳಿಗೆ ಕುಟುಂಬದವರೊಂದಿಗೆ ಅಗತ್ಯ ನೆರವಿನೊಡನೆ ನಡೆದುಕೊಳ್ಳುವ ರೀತಿ, ಇಳಿ ವಯಸ್ಸಿಗೆ ಇಳಿಯುತ್ತಿರುವ ಸಂಗಾತಿಯ ಜೊತೆಗೂ ಸಮಯ ಹಾಗೂ ಅರ್ಥಪೂರ್ಣ ವಿಚಾರ ವಿನಿಮಯ, ಇವೆಲ್ಲ ಬದುಕಿನ ಸಂಜೆಗೆ ಹೊಸ ರಂಗನ್ನು ತರುತ್ತದೆ.

ಅರ್ಥ ಸಂಪಾದನೆಯಲ್ಲೇ ತೊಡಗಿದ ಬದುಕನ್ನು ಈಗಲಾದರೂ ಪಾರಾಮಾರ್ಥದ ಕಡೆ ತಿರುಗಿಸುವುದು ಶ್ರೇಯಸ್ಕರ. ಧ್ಯಾನ ಪ್ರಾಣಾಯಾಮಾ, ಭಜನೆ ಮುಂತಾದ ಚಟುವಟಿಕೆಗಳು ಚಿತ್ತ ಸ್ವಾಸ್ಥ್ಯವನ್ನು ಕಾಪಾಡುತ್ತದೆ. ನಮ್ಮದೇ ನಡೆಯಲಿ, ಮನೆಯಲ್ಲಿ ನನ್ನ ಮಾತೇ ನಡೆಯಬೇಕು ಎಂಬ ಹಮ್ಮು ಬಿಮ್ಮು ಗಳೆಲ್ಲಾ ಅಳಿದು ಪಕ್ವವಾದ ಮನದಿಂದ ತಮ್ಮ ಜೀವನಾನುಭವವನ್ನು ಹಂಚಿ ನಾಲ್ಕು ಜನರಿಗೆ ಉಪಕಾರವಾಗಿ ಬದುಕುವುದು ಬಾಳಿಗೆ ಅರ್ಥವಲ್ಲದೆ ನೆಮ್ಮದಿಯನ್ನೂ ತರುತ್ತದೆ. ವೃದ್ಧಾಪ್ಯವು ಭಾರವಾಗದೇ ಹಣ್ಣಾದ ಎಲೆಯು ರಂಗನ್ನು ಪಡೆದಂತೆ ಇಳಿ ವಯಸ್ಸಿನಲ್ಲಿ ಜೀವನೋತ್ಸಾಹವನ್ನು ಬತ್ತದಂತೆ ಕಾಪಿಟ್ಟುಕೊಂಡರೆ ಬದುಕು ಸುಂದರವಾಗುತ್ತದೆ. ಕಥೆಯು ಹಲವು ತಿರುವುಗಳನ್ನು ಕಂಡರೂ ಸುಖಾಂತ್ಯವು ಮುದ ನೀಡುವಂತೆ ಬದುಕು ಹೇಗೆಲ್ಲಾ ಏರಿಳಿತದಿಂದ ಸಾಗಿದರೂ ಮುಪ್ಪಿನ ಸಮಯದ ಪಯಣ ಸುಗಮವಾಗುತ್ತದೆ. ಆದ್ದರಿಂದ ಮುಪ್ಪು ಕೂಡ ಒಪ್ಪುವಂತಿರಲಿ.

**ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ,**
**ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ,**
**ಕಾಲಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ,**
**ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ–**
**ಪೂಜಿಸು ನಮ್ಮ ಕೂಡಲಸಂಗಮದೇವನ.**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಮೈಕ್ರೋ ನ್ಯೂಸ್

### ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರ ಜನ ಸಂಪರ್ಕ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಂದ ಜಿಲ್ಲೆಯ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ಸಾರ್ವಜನಿಕರಿಂದ ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ/ಜನ ಸಂಪರ್ಕ ಸಭೆ ಏರ್ಪಡಿಸಲಾಗಿದೆ ಎಂದು ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ ಅವರು ತಿಳಿಸಿದ್ದಾರೆ.

ಪೊಲೀಸ್ ಅಧೀಕ್ಷಕರಾದ ಸಿದ್ಧರಾಜು.ಸಿ ಮಾರ್ಗದರ್ಶನದಲ್ಲಿ ಪೊಲೀಸ್ ನಿರೀಕ್ಷಕರಾದ ಸುರೇಶ್.ಎಂ.ಭಾವಿಮನಿ ಮತ್ತು ನಾಗರೆಡ್ಡಿ ಇವರ ನೇತೃತ್ವದಲ್ಲಿ ಬಳ್ಳಾರಿ, ಕುರುಗೋಡು, ಸಂಡೂರು ಮತ್ತು ಕಂಪ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಅಹವಾಲು ಸ್ವೀಕರಿಸುವ ಕಾರ್ಯಕ್ರಮ ನಡೆಯಲಿದೆ.

*ಅಹವಾಲು ಸ್ವೀಕರಿಸುವ ದಿನ ಮತ್ತು ಸ್ಥಳ:*
ಮೇ 07 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಬಳ್ಳಾರಿ ಹೊಸ ತಹಶೀಲ್ದಾರರ ಕಚೇರಿ ಸಭಾಂಗಣ. ಮೇ 14 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ಕುರುಗೋಡು ತಹಶೀಲ್ದಾರರ ಕಚೇರಿ ಸಭಾಂಗಣ. ಮೇ 17 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ಸಂಡೂರು ತಹಶೀಲ್ದಾರರ ಕಚೇರಿ ಸಭಾಂಗಣ ಮತ್ತು ಮೇ 23 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ಕಂಪ್ಲಿ ತಹಶೀಲ್ದಾರರ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.


ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಲು ನಮೂನೆ/ಫಾರಂ ನಂ.01 ಮತ್ತು 02 ಗಳನ್ನು ಸಹ ನೀಡಲಾಗುವುದು. ಕುಂದು ಕೊರತೆಗಳಿರುವ ಸಾರ್ವಜನಿಕರು ದೂರುಗಳಿದ್ದಲ್ಲಿ ನಿಗದಿಪಡಿಸಿದ ದಿನದಂದು ಅರ್ಜಿ ನಮೂನೆಯಲ್ಲಿ ಅಹವಾಲು ನೀಡಬಹುದು ಎಂದು ತಿಳಿಸಿದ್ದಾರೆ.

visit our website for daily updates
www.hampitimes.com
epaper.hampitimes.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಬುದ್ಧನಾಗದಿದ್ದರೂ ಪ್ರಬುದ್ಧರಾಗೋಣ...

# ಚಿಕ್ಕ ಕೊಡುಗೆ ಬೇರೊಬ್ಬರ ಬದುಕಿಗೆ ದೊಡ್ಡ ಹೊಳಪು



"ನನಗೆ ಅದು ಸಿಗಲಿಲ್ಲ", "ನನಗೆ ಬೇಕಾದವರು ಸಿಗಲಿಲ್ಲ", ಇವು ಮಾನವ ಹೃದಯದಲ್ಲಿ ಮೂಡುವ ನಿಷ್ಠುರ ವಾಕ್ಯಗಳು. ಇದು ಬೇಸರವಲ್ಲ, ನಿರಾಸೆಯಲ್ಲ, ಅದು ತನ್ನದೇ ಆದ ಸ್ವಾರ್ಥದ ಪಂಜರ. ಆದರೆ ಈ ಪಂಜರವನ್ನು ಒಡೆದು ಚೂರಾಡಿ, ಹಾರಾಡುವ ಪರಿಯ ಹಕ್ಕಿಯಾಗಿ ಯೋಚನೆ ಹಾರಬೇಕಾದ ಕ್ಷಣ ಇದು. ಮನುಷ್ಯನು ಎಲ್ಲವನ್ನೂ ತನ್ನ ಲಾಭದಿಂದ ಅಳೆಯಲಾರಂಭಿಸಿದಾಗ, ಅವನು ಇತರರ ನೋವನ್ನೂ, ಮುಗುಳ್ನಗೆಗಳನ್ನೂ ನೋಡಿ ಮೌನವಾಗುತ್ತಾನೆ. ಆದರೆ ಪ್ರಬುದ್ಧನಾದಾಗ ಅವನು "ನಾನು ಪಡೆಯಬೇಕೆಂಬುದಲ್ಲ, ನಾನು ಏನು ಕೊಟ್ಟೆ?" ಎಂಬ ಪ್ರಶ್ನೆ ಕೇಳುತ್ತಾನೆ. ಇದೇ ಉದಾರತೆಗೂ ಮತ್ತು ಆತ್ಮ ಪ್ರಜ್ಞೆಗೂ ದಾರಿ.

ನಮಗೆ ಬೇಕಾದವರು ಸಿಕ್ಕಿರಲಿಲ್ಲ ಎಂಬ ಅಳಲು ಬಿಡುವುದು ಸುಲಭ. ಆದರೆ ನಮಗಿರುವವರನ್ನು ತಾಳ ಮೇಳದಿಂದ ತಬ್ಬಿಕೊಳ್ಳುವುದು ಗುರಿಯಾಗ ಬೇಕು. ಯಾರಿಗೋ ನಾವೇ ಬೇಕಾದವರು ಎಂಬ ಸತ್ಯವನ್ನು ಅರ್ಥಮಾಡಿ ಕೊಳ್ಳುವುದು ಬೃಹತ್ತಾದ ಭಾವದ ಪ್ರಾರಂಭ. ಈ ಪ್ರಪಂಚ ನಮ್ಮ ಕೋರಿಕೆಯ ತೃಪ್ತಿಗಿಂತಲೂ, ನಮ್ಮ ಕೊಡುಗೆಯ ಅಮೃತಕ್ಕಷ್ಟೇ ಮೌಲ್ಯವನ್ನಿಡುತ್ತದೆ.

"ನನಗೆ ಅದು ಸಿಗಲಿಲ್ಲ", "ನನಗೆ ಬೇಕಾದವರು ಸಿಗಲಿಲ್ಲ", ಈ ಮಾತುಗಳು ನಮ್ಮೆಲ್ಲರ ಮನಸ್ಸಿನಲ್ಲಿ ಕೆಲವೊಮ್ಮೆ ದಿಕ್ಕು ತಪ್ಪಿದ ನದಿಯಂತೆ ಹರಿದಿರುತ್ತವೆ. ಇವು ಕೇವಲ ಅಳಲಿನ ವಾಕ್ಯಗಳಷ್ಟೇ ಅಲ್ಲ. ಇವು ನಮ್ಮೊಳಗಿನ ಅಪೂರ್ಣತೆಯ ನಿಟ್ಟುಸಿರುಗಳು. ಆದರೆ ಈ ನಿಟ್ಟುಸಿರನ್ನು ಚಿಂತನೆಯ ದೀಪವನ್ನಾಗಿ ಪರಿವರ್ತಿಸಬಲ್ಲದು ನಮ್ಮ ಯೋಚನೆಗಳ ಸ್ವರೂಪ.

ನಾವು ಹುಡುಕುವುದೆಂದರೆ ನಮ್ಮನ್ನು ತೃಪ್ತಿಗೊಳಿಸುವವರನ್ನು, ನಮ್ಮ ಕನಸುಗಳಂತೆ ನಡೆವವರನ್ನು. ಆದರೆ ನಾವು ಮರೆಯುವದು ಎಂದರೆ, ನಾವು ಇತರರ ಕನಸುಗಳಲ್ಲೂ ಪಾತ್ರವಿರಬಹುದು ಎಂಬುದನ್ನು. ನಾನು ನನ್ನ ಕನಸುಗಳನ್ನು ತೀರಿಸಲು ಇನ್ನೊಬ್ಬನನ್ನು ಬೇಕಾದಂತೆ ಹುಡುಕಿದರೆ, ಅವನು ನನ್ನದಾಗುವುದಿಲ್ಲ. ಆದರೆ ನಾನು ಯಾರಿಗಾದರೂ ಕನಸು ಆಗಬಲ್ಲೆ ಎಂಬ ಭಾವವಿದ್ದರೆ, ಪ್ರಬುದ್ಧತೆಯ ಮೊದಲ ಪಾಠ ಅದೇ ಅಲ್ಲವೇ?

ಪ್ರಪಂಚದ ದೊಡ್ಡ ಮರ್ಮವೆಂದರೆ ನಾವು ಸಿಗದವರಿಗೆ ಬೇಕಾಗಿರಬಹುದು!. ನಮ್ಮ ಕಣ್ಣಿಗೆ ಕಾಣದಷ್ಟರಲ್ಲಿ, ನಾವು ಬೇಕಾದವರು ಯಾರಿಗೋ ಆಗಿದ್ದೇವೋ ಎಂಬುದನ್ನು ಅರ್ಥಮಾಡಿಕೊಳ್ಳಲಾರೆವು. ನಮ್ಮ ತಾತ್ಕಾಲಿಕ ನೋವು, ನಮ್ಮ ದೀರ್ಘಕಾಲದ ಬೆಳವಣಿಗೆಗೆ ನೆಲೆಯಿರಬಹುದು. ಯಾಕೆಂದರೆ ದಾರಿಯಲ್ಲಿ ಕಳೆದುಹೋದವರಿಗೆ ದಾರಿ ತೋರಿಸಿದಾಗ, ನಮಗೆ ಅದು ಸಿಕ್ಕದ್ದಕ್ಕಿಂತಲೂ ಹೆಚ್ಚು ತೃಪ್ತಿ ಸಿಗುತ್ತದೆ. ಬೇಸರವೆಂದರೆ "ಅವನು ನನ್ನ ಜೊತೆಯಾಗಿರಲೇಬೇಕಿತ್ತು", ಆದರೆ ಇಂದು ನಾನು ಕೇಳಬಹುದು: "ಅವನಿಗಾಗಿ ನಾನು ಹೊತ್ತಿದ್ದೇನೇನು?"

ಪ್ರಬುದ್ಧತೆಯ ಕೆಲವು ಆಚರಣೆಗಳು:

- ಉದಾರ ಯೋಚನೆಗೊಂದು ಬೀಜವಿಡಿ:
- ಬೇಸರದಲ್ಲಿ ಕುಗ್ಗದಂತೆ ಯೋಚಿಸಿ: "ನೀನು ಪಡೆದಿರದಷ್ಟು ಬೇಸರಿಸಬೇಡ, ನೀನು ನೀಡದಷ್ಟು ಬೇಸರಿಸು".
- ಸಮವಸ್ತ್ರದಲ್ಲಿ ನೋಡುವ ದೃಷ್ಟಿ ಬೆಳೆಯಲಿ; ಎಲ್ಲರೂ ತಮ್ಮದೇ ಆದ ಅಗತ್ಯಗಳಿಂದ ಬಂದವರಷ್ಟೆ.
- ಇತರರ ಬಾಳಿಗೆ ಬೆಳಕು ತರುವ ಹಂಬಲ ಇರಲಿ, ಕಾರಣ ನಿನ್ನಿಂದ ಹತ್ತಿರವಿದ್ದವರು ಸಾಂತ್ವನವನ್ನು ಆಶಿಸುತ್ತಿರಬಹುದು.
- ನಾವು ಪಡೆದದ್ದನ್ನಷ್ಟೆ ಅಲ್ಲ, ನೀಡಿದದ್ದನ್ನೂ ಮೆಲುಕು ಹಾಕೋಣ.. ಪ್ರಪಂಚಕ್ಕೆ ಬೇಕಾದವರು ಆಗೋಣ. ನಮ್ಮ ಚಿಕ್ಕ ಕೊಡುಗೆಗಳಿಂದ ಬೇರೊಬ್ಬರ ಬದುಕು ದೊಡ್ಡ ಹೊಳಪಾಗುತ್ತದೆ ಎಂಬ ಭರವಸೆಯಲ್ಲಿ ಬದುಕೋಣ.
- ಪ್ರತಿಕ್ಷಣ ಪ್ರಾರ್ಥನೆಯಂತಾಗಲಿ: "ಯಾರಾದರೂ ನನ್ನನ್ನು ನೆನೆಸುತ್ತಿದ್ದಾರೆ. ನನ್ನ ಮಾತೊಂದು ಅವರಿಗೆ ಸ್ಪರ್ಶವಾಯಿತೆಂದು..."
- ಮತ ಭಿನ್ನತೆಗಿಂತ ಮಮತೆಯನ್ನು ಆಯ್ಕೆ ಮಾಡೋಣ: ಎಲ್ಲರಿಗು ತಮ್ಮದೇ ಆದ ನೋವಿದೆ. ನಮ್ಮ ನೋವು ಎಲ್ಲಕ್ಕಿಂತ ಭಿನ್ನ ಎನ್ನುವ ಅಭಿಮಾನ ಬಿಟ್ಟು, ಅವರ ನೋವನ್ನು ಅರಿಯೋಣ.
- ಸಂಗತಿಗೆ ಹತ್ತಿರವಾಗುವುದರ ಜೊತೆಗೆ ಮುಕ್ತರಾಗೋಣ ಕಾರಣ ಅಲ್ಪ ಅಪಹಾಸ್ಯ, ತುಚ್ಚ ನಿರ್ಲಕ್ಷ್ಯ ಇವು ಬೇರೊಬ್ಬರ ಮನಸ್ಸಿಗೆ ಬೇರೆ ಅಳಲನ್ನುಂಟುಮಾಡಬಹುದು.
- ಸಾವಿರ ಪ್ರೀತಿ ಸಿಕ್ಕಿಲ್ಲದಿದ್ದರೂ, ಒಂದು ಪ್ರೀತಿ ಕೊಡೋಣ ಏಕೆಂದರೆ ನಾವು ನೀಡುವ ಪ್ರೀತಿಯೇ ನಮ್ಮನ್ನು ಜೀವಂತವಾಗಿಡುತ್ತದೆ.

**ಪ್ರಬುದ್ಧರಾದ ಕೆಲವು ಉದಾಹರಣೆಗಳನ್ನು ಗಮನಿಸೋಣ ಬನ್ನಿ.**

1: ನಾಗಪ್ಪ ಒಬ್ಬ ಸಾಧಾರಣ ಶಿಕ್ಷಕ. ಅತಿ ಶ್ರದ್ಧೆಯಿಂದ ತನ್ನ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿದ್ದ. ಆದರೆ ಅವನಿಗೋಸ್ಕರ ಯಾರೂ 'ಧನ್ಯವಾದ' ಹೇಳಲಿಲ್ಲ, ಯಾರು ಮುಂದೆಲ್ಲಾ ಸಹಕಾರ ನೀಡಲಿಲ್ಲ. ಒಂದು ದಿನ ಅವನು ಶಾಲೆಯಿಂದ ನಿವೃತ್ತಿಯಾದಾಗ, ಅನೇಕ ಶಿಷ್ಯರು ದೂರದೂರಿನಿಂದ ಬಂದು ಆತನ ಕಾಲಿಗೆರಗಿದರು.. ಅವರೆಲ್ಲ ಹೇಳಿದ ಒಂದೇ ಮಾತು "ಸರ್, ನೀವು ಆಗ ಹೇಳಿದ ಒಂದು ಮಾತು ನಮ್ಮ ಬದುಕು ಬದಲಿಸಿತು." ಅವನು ತಕ್ಷಣವೇ ಅರ್ಥಮಾಡಿಕೊಂಡನು, ಅವನಿಗೆ ಬೇಕಾದದ್ದು ಬೇಕಾದಾಗ ಸಿಗದಿದ್ದರೂ, ಅವನು ಇನ್ನೊಬ್ಬರಿಗೆ ಬೆಳಕಾಗಿದ್ದ.



ಡಾ. ಪ್ರಸನ್ನ ದೇವರ ಮಠ
ಅನಿಲಕುಮಾರ್, ಮಾಗಳ

Scan For Digital Colourful
HAMPI TIMES E-paper

2. ಪ್ರಜ್ವಲ್ ಯೌವನದಲ್ಲಿ ತನ್ನ ಪ್ರೇಮದಲ್ಲಿ ತೀವ್ರವಾದ ವಿಫಲತೆಯನ್ನು ಅನುಭವಿಸಿದನು. "ನನಗೆ ಬೇಕಾದವಳು ನನ್ನದಾಗಲಿಲ್ಲ" ಎಂಬ ಆವೇಶದಲ್ಲಿ, ಎಲ್ಲರನ್ನು ಶಂಕೆಪಟ್ಟು ನೋಯಿಸುತ್ತಾ ಹೋದ. ಅಂತಿಮವಾಗಿ ಅವನು ಎಲ್ಲರಿಂದ ದೂರವಾದ. ಅವನು ತನ್ನ ನೋವನ್ನು ಅರಿವಿಲ್ಲದವರ ಮೇಲಿಡುತ್ತಿದ್ದ. ಆದರೆ ಹತ್ತಾರು ವರ್ಷಗಳ ನಂತರ ಅವನು ಒಬ್ಬ ಸ್ನೇಹಿತನ ಮೌನವನ್ನು ಕೇಳಿದಾಗ, ತನ್ನೊಳಗಿನ ದುಃಖವೇ ಎಲ್ಲಾ ಸಮಸ್ಯೆಗಳಿಗೆ ಮೂಲ ಎಂದು ಅರಿತು ಉದಾರ ಯೋಚನೆ ಕಡೆಗೆ ಮುನ್ನಡೆಯಲು ಪ್ರಾರಂಭಿಸಿದ.

3. ಶ್ರೀಮತಿ ಚಂದ್ರಕಲಾ ಎಂಬಾಕೆ ದಿನಗೂಲಿ ಕಾರ್ಮಿಕರ ಮಕ್ಕಳಿಗೆ ಉಚಿತ ಟ್ಯೂಶನ್ ನೀಡುತ್ತಿದ್ದರು. ಕೆಲವೇಳೆ ಆ ಮಕ್ಕಳು ಈಕೆ ಬೈದಿದ್ದರು. ಹೊಡೆದಿದ್ದರು. ಈ ವಿಷಯಕ್ಕೆ ತಾಯಂದಿರಿಂದ ತರಾಟೆ ಬಂದಿತ್ತು. ಆಕೆಗೆ ಕೋಪ ಬಾರದಿರಲಿಲ್ಲ. ಬದಲಿಗೆ ಮೌನದಿಂದ ಇನ್ನಷ್ಟು ಪ್ರೀತಿ ನೀಡಿದರು. ಹಲವು ವರ್ಷಗಳ ನಂತರ ಆ ಮಕ್ಕಳಲ್ಲಿ ಕೆಲವರು ಇಂಜಿನಿಯರ್, ಶಿಕ್ಷಕರಾಗಿ ಆಕೆಯ ಪಾದಸ್ಪರ್ಶಕ್ಕೆ ಬಂದು "ನೀವು ನಮ್ಮೆಲ್ಲರ ತಾಯಿ" ಎಂದರು. ತಾಯಂದಿರ ಬೈಗುಳದಿಂದ ಆಕೆ ನಿರಾಶೆಯಾದರೂ, ಕೊಟ್ಟ ಪ್ರೀತಿಯ ಪ್ರತಿಫಲ ಆಕೆಗೆ ತೃಪ್ತಿಯ ಬೀಜವಾಯಿತು.

4. ಮಲ್ಲಿಕಾರ್ಜುನ ಒಂಬ ಒಬ್ಬ ಯುವಕನು ತನ್ನ ಸ್ನೇಹಿತರಿಗೆ ಅನೇಕ ಸಲಹೆ ನೀಡುತ್ತಿದ್ದ, ಸಹಾಯ ಮಾಡುತ್ತಿದ್ದ. ಆದರೆ ತಾನು ಸಂಕಷ್ಟದಲ್ಲಿದ್ದಾಗ ಯಾರೂ ಹಿಂದಿರುಗಲಿಲ್ಲ. ಆಗ ಅವನು ನಿಶ್ಚಯಿಸಿದ: "ಇನ್ನು ಮುಂದೆ ಯಾರಿಗೂ ಸಹಾಯ ಮಾಡಬಾರದು." ಈ ತೀವ್ರ ತೀರ್ಮಾನದಿಂದ ಅವನು ತನ್ನ ಚಟುವಟಿಕೆ ನಿಲ್ಲಿಸಿದ. ಆದರೆ ಕೆಲವರ್ಷಗಳ ನಂತರ ಅವನ ಹಿಂದಿನ ಸಹಾಯದಿಂದ ಇತರರು ಬೆಳೆಯುತ್ತಿದ್ದ ದೃಶ್ಯ ಕಂಡಾಗ, ಅವನು ತಾನಾಗಿಯೇ ಒಬ್ಬ ಶ್ರೇಷ್ಠ ವ್ಯಕ್ತಿಯಾಗಿದ್ದನೆಂದು ಅರಿತನು.

ನೀವು ನೀಡಿದ ಪ್ರೀತಿ, ಸಹಾಯ, ಸಮಯ. ಫಲದ ನಿರೀಕ್ಷೆಯಲ್ಲಿ ಬೇಸರಿಸಿಕೊಳ್ಳಬಾರದು. ಯಾರೂ ಜೊತೆಗಿಲ್ಲ ಇಲ್ಲವೆನ್ನಿಸುವ ಕ್ಷಣದಲ್ಲಿ, ಯಾರಿಗಾದರೂ ನೀವು ಸಾಕಾಗಿದ್ದೀರೆಂಬ ನೆನಪನ್ನು ಮೈಮರೆತು ನೆನಪಿಸಿ ಕೊಳ್ಳಿ. ನೀವು ಸಿಗದವರು ಕಳೆದು ಹೋದವರು ಅಲ್ಲ; ನೀವು ಸಿಕ್ಕವರು ದೇವರು ಕೊಟ್ಟವರೆಂಬ ಅರಿವಿರಲಿ.

ಅಂತಿಮವಾಗಿ, ಒಂದು ಅಂತರಂಗದ ಪ್ರಶ್ನೆ ನೀವು ಏನನ್ನಾದರೂ ಒಬ್ಬನಿಗೆ ಕೊಟ್ಟಿರುವಿರಾ? ಒಂದು ಸಂತೈಸುವ ನಗೆ, ಒಂದು ತಾಳ್ಮೆಯ ಸ್ಪರ್ಶ, ಅಥವಾ ಕೇವಲ ಒಂದು ಕೇಳುವ ಕಿವಿ? ಈ ಎಲ್ಲವೂ ನೀವು ಬೇಕಾದವನಾಗಿ ಬದಲಾವಣೆಯಲ್ಲೂ ಸ್ಪಂದನೆಗೂ ಕಾರಣವಾಗಬಹುದು. ಸೂಕ್ಷ್ಮವಾದ ಭಾವನೆಗಳು, ಬದಲಾವಣೆಗೊಂದು ಬೀಜವಾಗಬಹುದು. ನಾವು "ಪಡೆಯದೆ ಹೋದ" ನೋವಿನಲ್ಲಿ ಅಪ್ಪಳಿಸುತ್ತಿದ್ದರೆ, ಇನ್ನು ಮುಂದೆ "ನಾವು ಕೊಟ್ಟದ್ದರ" ಬೆಳಕಿನಲ್ಲಿ ಸಾಗೋಣ. ನಮ್ಮ ಬದುಕು ಆಳವಾದ ಮೌನವಲ್ಲ, ಉದಾರತೆಗೆ ಅಲೆಯಾದ ನದಿಯಾಗಲಿ. ಎಲ್ಲರೂ ಬುದ್ಧರಾಗಲು ಸಾದ್ಯವಿಲ್ಲ. ಆದರೆ ಪ್ರಬುದ್ಧರಾಗಲು ಸಾಧ್ಯವಿದೆ. ಕೊಂಚ ಕಷ್ಟವಾದರೂ ನಾವು ಪ್ರಬುದ್ಧರಾಗಲೇಬೇಕು. ನೆನಪಿರಲಿ ಪ್ರಪಂಚದ ತುಂಬಾ ಅನೇಕ ಬುದ್ಧಿವಂತರಿದ್ದಾರೆ. ನಮ್ಮವರ ಮನಸಿಗೆ ಹಿತವಾಗುವುದು ಬುದ್ದಿವಂತರಾದಾಗ ಅಲ್ಲ. ಪ್ರಬುದ್ಧವಂತರಾದಾಗ.ಕ್ಷುಲ್ಲಕಕಾರಣಕ್ಕೆಕಳೆದುಕೊಂಡದ್ದು ಅತ್ಯ ಅನೇಕ ಅಲ್ಲವೇ?.

ಕೊನೆಯಲ್ಲಿ ಕನ್ನಡದ ಏಳು ಸುತ್ತಿನ ಕೋಟೆ ಸಿನಿಮಾದ ಅರ್ಥಪೂರ್ಣವೊಂದು ಹಾಡು ಹೀಗಿದೆ. ಮುಳ್ಳಲ್ಲಿ ನಡೆಯುದಕ್ಕೆ ಎಚ್ಚರಿಕೆ ಬೇಕು. ಜಗದೆಲ್ಲ ಕತ್ತಲೆಗೆ ನೀನಲ್ಲ ಬೆಳಕು. ಒಂದು ರೋಗದ ರೆಂಬೆ ಕಡಿದು ಗೆಲ್ಲುವೆನೆಂದೆ... ಕೋಟಿ ಬೇರುಗಳಿಂದ ನರಳುತಿದೆ ಬದುಕು. ಏನೋ ಮಾಡಲು ಹೋಗಿ ಏನು ಮಾಡಿದೆ ನೀನು. ಆಧುನಿಕ ಜೀವನದಲ್ಲಿ ಬುದ್ಧನಾಗುವುದು ಕಷ್ಟ. ಆದರೆ ನಮ್ಮಷ್ಟಕ್ಕೆ ನಾವು ಪ್ರಬುದ್ಧರಾಗೋಣವಲ್ಲವೇ?

# ಶುದ್ಧಕುಡಿಯುವ ನೀರಿಗೆ ರಾಜ್ಯದ ಯಾವುದೇ ಗ್ರಾಮದಲ್ಲೂ ಸಮಸ್ಯೆ ಆಗಬಾರದು : ಸಿಎಂ

## ಹಣ ಕಾಸಿನ ಕೊರತೆ ಇಲ್ಲ. ಎಷ್ಟು ಬೇಕಾದರೂ ಹಣ ಕೊಡುತ್ತೇವೆ

## ಜಿಲ್ಲಾಧಿಕಾರಿಗಳಿಗೆ-ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಸಿಎಂ ಸ್ಪಷ್ಟ ಸೂಚನೆ



**ಹಂಪಿ ಟೈಮ್ಸ್ ಬೆಂಗಳೂರು**

ಶುದ್ದ ಕುಡಿಯುವ ನೀರಿಗೆ ರಾಜ್ಯದ ಒಂದೇ ಒಂದು ಗ್ರಾಮದಲ್ಲೂ ಸಮಸ್ಯೆ ಆಗಬಾರದು ಎಂದು ಜಿಲ್ಲಾಧಿಕಾರಿಗಳಿಗೆ – ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟ ಸೂಚನೆ ನೀಡಿದರು.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಜಿಲ್ಲಾಧಿಕಾರಿಗಳೊಂದಿಗೆ ನಡೆಸಿದ ವಿಡಿಯೋ ಸಂವಾದದಲ್ಲಿ ಈ ಸೂಚನೆ ನೀಡಿದರು.

**ಸಭೆಯಲ್ಲಿ ಸಿಎಂ ನೀಡಿದ ಇತರೆ ಸೂಚನೆಗಳು...**

– ರಾಜ್ಯದಲ್ಲಿ ಎಲ್ಲಿಯೂ ಕುಡಿಯುವ ನೀರಿಗೆ ಯಾವುದೇ ಕಾರಣಕ್ಕೂ ತೊಂದರೆಯಾಗಬಾರದು. ಕುಡಿಯುವ ನೀರಿನ ನಿರ್ವಹಣೆಗೆ ಯಾವುದೇ ಹಣಕಾಸಿನ ಕೊರತೆ ಇರುವುದಿಲ್ಲ. ಪಂಚಾಯತ್ ರಾಜ್ ಇಲಾಖೆಗೆ 60 ಕೋಟಿ ರೂ. ಈಗಾಗಲೇ ಬಿಡುಗಡೆ ಮಾಡಲಾಗಿದೆ.

– ಜಿಲ್ಲೆಗಳಲ್ಲಿ ತುರ್ತು ಕುಡಿಯುವ ನೀರಿನ ಪೂರೈಕೆಗೆ ಜಿಲ್ಲಾಧಿಕಾರಿಗಳು ಕ್ರಿಯಾ ಯೋಜನೆ ರೂಪಿಸಿ, ಟಾಸ್ಕ್ ಫೋರ್ಸ್‌ನಿಂದ ಅನುಮೋದನೆ ಪಡೆದುಕೊಂಡು ಅನುಷ್ಠಾನಗೊಳಿಸಲು ಮುಖ್ಯ ಮಂತ್ರಿ ಅವರು ಸೂಚನೆ ನೀಡಿದರು.

– ಪ್ರತಿ ವರ್ಷ ಕುಡಿಯುವ ನೀರಿನ ತೊಂದರೆ ಎದುರಿಸುತ್ತಿರುವ ಗ್ರಾಮಗಳಲ್ಲಿ ಸಮಸ್ಯೆಯನ್ನು ಶಾಶ್ವತವಾಗಿ ನೀಗಿಸಲು ಯೋಜನೆ ರೂಪಿಸಬೇಕು.

– ಅಗತ್ಯಬಿದ್ದರೆ ಮಾತ್ರ ಬೋರ್ವೆಲ್ಗಳನ್ನು ಕೊರೆಯಬೇಕು. ಯಾವುದೇ ಕಾರಣಕ್ಕೂ ಅನಗತ್ಯವಾಗಿ ಬೋರ್ವೆಲ್ ಕೊರೆದು ವೆಚ್ಚ ಮಾಡ ಬಾರದು ಎಂದು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

– ರಾಜ್ಯದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ವಾಡಿಕೆಗಿಂತ ಶೇಕಡಾ 55ರಷ್ಟು ಮಾನ್ಸೂನ್ ಪೂರ್ವ ಹೆಚ್ಚು ಮಳೆಯಾಗಿದೆ. ವಾಡಿಕೆಗಿಂತ ಯಾವುದೇ ಜಿಲ್ಲೆಯಲ್ಲಿ ವಾಡಿಕೆಗಿಂತ ಕಡಿಮೆ ಮಳೆ ದಾಖಲಾಗಿಲ್ಲ.

– 27 ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಎಲ್ಲಾ ಜಲಾಶಯಗಳಲ್ಲಿ ಶೇ.50ರಿಂದ ಶೇ.60 ರಷ್ಟು ಹೆಚ್ಚಿನ ನೀರಿನ ಸಂಗ್ರಹವಿದೆ.

– ಈ ವರ್ಷ ವಾಡಿಕೆಗಿಂತ ಹೆಚ್ಚು ಮುಂಗಾರು ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

– ಮಾನ್ಸೂನ್ ವಿಳಂಬವಾದರೆ 6319 ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಬಹುದು ಎಂದು ಗುರುತಿಸಲಾಗಿದೆ.

– ಪ್ರಸ್ತುತ 551 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 123ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಅಗತ್ಯ ಸಂದರ್ಭದಲ್ಲಿ ನೀರು ಪಡೆಯಲು ಈಗಾಗಲೇ 3ಸಾವಿರ ಖಾಸಗಿ ಬೋರ್ವೆಲ್ಗಳನ್ನು ಗುರುತಿಸ ಲಾಗಿದ್ದು,480ಬೋರ್ವೆಲ್ಗಳನ್ನುಖಾಸಗಿಯವರಿಂದ ಬಾಡಿಗೆ ಪಡೆದು ನೀರು ಒದಗಿಸಲಾಗುತ್ತಿದೆ.

# ಗ್ರಾಮೀಣ ಕ್ಷೇತ್ರದ ಹಿಂದುಳಿದಿರುವಿಕೆ ಪರಿಗಣಿಸಿ ಪ್ರತ್ಯೇಕ ಅಧ್ಯಯನ ನಡೆಸಿ

## ಶಾಸಕರಾದ ಬಸನಗೌಡ ದದ್ದಲ್ ಅಧಿಕಾರಿಗಳಿಗೆ ಸೂಚನೆ

**ಹಂಪಿ ಟೈಮ್ಸ್ ರಾಯಚೂರು**

ರಾಯಚೂರು ತಾಲೂಕಿನಲ್ಲಿ ಕೃಷ್ಣ ಮತ್ತು ತುಂಗಭದ್ರಾ ನದಿಗಳಿದ್ದರೂ, ಅವುಗಳ ಮೂಲಕ ಕೃಷಿ ಜಮೀನು ನೀರಾವರಿಯಾಗಿದ್ದರೂ, ಸ್ಥಳೀಯವಾಗಿ ಬಹುಸಂಖ್ಯಾತ ಸಮುದಾಯಗಳಿಗೆ ಆರ್ಥಿಕ ಚಟುವಟಿಕೆಗಳಿಗೆ ಸಹಾಯಕವಾಗಿರುವದಿಲ್ಲ, ಈ ಅಂಶಗಳನ್ನು ಸಮಿತಿಯು ವರದಿ ಸಲ್ಲಿಸುವಾಗ ಅಂಕಿ ಅಂಶಗಳೊಂದಿಗೆ ಸೂಕ್ತ ಶಿಫಾರಸ್ಸು ಮಾಡಬೇಕು ಎಂದು ಪರಿಶಿಷ್ಟ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಸಲಹೆ ಮಾಡಿದರು.

ಆರ್ಥಿಕ ತಜ್ಞರಾದ ಪ್ರೊ.ಎಂ. ಗೋವಿಂದರಾವ್ ಅವರ ಅಧ್ಯಕ್ಷತೆಯಲ್ಲಿ ರಚನೆಯಾದ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯು ಮೇ 6ರಂದು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಸಂವಾದ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ರಾಯಚೂರು ನಗರ ವಿಧಾನಸಭಾ ಕ್ಷೇತ್ರ ಮತ್ತು ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರ ಎರಡು ಸೇರಿಸಿ ಒಂದೇ ಸೂಚ್ಯಂಕ ನೀಡಿರುವುದರಿಂದ ಗ್ರಾಮೀಣ ಕ್ಷೇತ್ರಕ್ಕೆ ಅನ್ಯಾಯವಾಗಿರುತ್ತದೆ. ರಾಯಚೂರು ನಗರ ಕ್ಷೇತ್ರದ ವ್ಯಾಪ್ತಿಯು ಅತೀ ಕಡಿಮೆ ಇದ್ದು, ಇಲ್ಲಿ ವಿವಿಧ ಪದವಿ ಹಾಗೂ ವೈದ್ಯಕೀಯ ಮತ್ತು ವೃತ್ತಿಪರ ಕಾಲೇಜುಗಳಿವೆ. ಆದರೆ ಗ್ರಾಮೀಣ ಕ್ಷೇತ್ರದಲ್ಲಿ ಯಾವುದೇ ಕಾಲೇಜುಗಳು ಇರುವುದಿಲ್ಲ. ಮತ್ತು ನಗರ ಪ್ರದೇಶದಲ್ಲಿ ಅತೀ ಹೆಚ್ಚು ತೆರಿಗೆ ಸಂಗ್ರಹವಾಗುತ್ತಿದ್ದು, ಅಭಿವೃದ್ಧಿಗೆ ಸಹಕಾರಿಯಾಗಿರುತ್ತದೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಅನುದಾನದ ಕೊರತೆಯಿಂದಾಗಿ ಕ್ಷೇತ್ರದ ಅಭಿವೃದ್ಧಿಯು ಕುಂಠಿತವಾಗಿರುತ್ತದೆ. ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಹಿಂದುಳಿದಿರುವಿಕೆಯನ್ನು ಪರಿಗಣಿಸಿ ಪ್ರತ್ಯೇಕವಾಗಿ ಅಧ್ಯಯನ ನಡೆಸಿ ಸೂಚ್ಯಂಕ ನಿಗದಿಪಡಿಸಬೇಕೆಂದರು.

ನಂಜುಂಡಪ್ಪ ವರದಿಯಲ್ಲಿ 35 ಸಾಮಾಜಿಕ ಮತ್ತು ಆರ್ಥಿಕ ಸೂಚ್ಯಂಕಗಳನ್ನು ಪರಿಗಣಿಸಿ ಸಮಗ್ರ ಸಂಯೋಜಿತ ಅಭಿವೃದ್ಧಿ ಸೂಚ್ಯಂಕಗಳನ್ನುಅಂದಾಜಿಸಲಾಗಿದೆ. ಇದರಲ್ಲಿ ವಾಸ್ತವಂಶಗಳನ್ನು ಪರಿಗಣಿಸಬೇಕು. ನೀರಾವರಿ ಸೌಲಭ್ಯಗಳನ್ನು ಪರಿಗಣಿಸುವಾಗ, ರಾಯಚೂರು ತಾಲ್ಲೂಕು ತುಂಗ-ಭದ್ರಾ ಎಡದಂಡೆ ಕಾಲುವೆ ಮೂಲಕ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಆದರೆ ವಾಸ್ತವವಾಗಿ ತುಂಗ-ಭದ್ರಾ ಎಡದಂಡೆ ಕಾಲುವೆ ನಿರ್ಮಾಣವಾದ ದಿನದಿಂದ ಇಲ್ಲಿಯವರೆಗೆ ಒಂದು ಹನಿ ನೀರು ರೈತರ ಜಮೀನಿಗೆ ಹರಿದಿರುವುದಿಲ್ಲ. ಆದರೂ ನೀರಾವರಿ ಎಂದು ಪರಿಗಣಿಸಿದರೆ ಆರ್ಥಿಕ ಸೂಚ್ಯಂಕ ಹೆಚ್ಚಾಗುತ್ತದೆ. ಅದೇ ರೀತಿ ರಾಯಚೂರು ತಾಲ್ಲೂಕಿನಲ್ಲಿ ಹಲವು ಬೃಹತ್ ಹಾಗೂ ಮಧ್ಯಮ ಕೈಗಾರಿಗಳು ಸ್ಥಾಪಿಸಲ್ಪಟ್ಟಿವೆ. ಆದರೆ ಈ ಕೈಗಾರಿಕೆಗಳಲ್ಲಿ ಸ್ಥಳೀಯವಾಗಿ ಉದ್ಯೋಗ ನೀಡದೇ ಇರುವದರಿಂದ ಆ ತಾಲ್ಲೂಕಿನ ಜನತೆಗೆ ಯಾವುದೇ ಉಪಯೋಗವಾಗಿರುವುದಿಲ್ಲ. ಇದೆಲ್ಲವನ್ನೂ ಪರಿಗಣಿಸಬೇಕು ಎಂದರು.

ರಾಜ್ಯದಲ್ಲಿ ಇರುವ ಒಟ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು 2531 ಪೈಕಿ ಬೆಂಗಳೂರು ವಿಭಾಗಗಳಲ್ಲಿ ನಿಯಮದ ಪ್ರಕಾರ 406 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಆದರೆ ಅಲ್ಲಿ 662 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ. ಬೆಳಗಾವಿ ವಿಭಾಗದಲ್ಲಿ 436 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರಬೇಕು. ಆದರೆ 472 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ. >>4

Grow Your Business With Us
S.M.Traders & Services
Authorised Distributor for ATLAS COPCO Portable Screw Air Compressors for North Karnataka
Water Well and Non Water Well Applications
web: www.smtradersandservices.com
M: 9686663125 - 9686663132
Atlas Copco
Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka

## ನಿನಗೆ ನೀನೇ ಬೆಳಕು

ಮನುಷ್ಯನಲ್ಲಿ ಆಸೆ ಇಲ್ಲದಿದ್ದರೆ ಪ್ರಯತ್ನವೂ ಇರುವುದಿಲ್ಲ
– ಮಹಾವೀರ



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 06–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.60 ಅಡಿ |
| ಒಳ ಹರಿವು | 1860 ಕ್ಯುಸೆಕ್ |
| ಹೊರ ಹರಿವು | 281 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.069 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1577.84 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 138 ಕ್ಯುಸೆಕ್ |
| ಸಾಮರ್ಥ್ಯ | 3.509 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

07–05–2025 – ಬುಧವಾರ

| | |
|---|---|
| ತಿಥಿ | : ದಶಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂ.ಪಾಲ್ಗುಣ |
| ಯೋಗ | : ವ್ಯಾಘಾತ |
| ಕರಣ | : ಗರಜ |
| ಸೂರ್ಯೋದಯ | : 05:51:10 |
| ಸೂರ್ಯಾಸ್ತ | : 18:56:04 |
| ರಾಹು ಕಾಲ | : 12:24–14:02 |
| ಯಮಘಂಡ ಕಾಲ | : 07:29–09:07 |
| ಗುಳಿಕ ಕಾಲ | : 10:46–12:24 |

# ಒಳಮೀಸಲಾತಿ ಜಾರಿಗೆ ನಾವು ಬದ್ಧ : ಸಿ.ಎಂ

## ಮೂರೂ ಹಂತದ ಸಮೀಕ್ಷೆ । ಪೂರ್ಣವಾಗಿ ತೊಡಗಿಸಿಕೊಂಡು ಮಾಹಿತಿ ನೀಡಿ । ವೈಜ್ಞಾನಿಕ ದತ್ತಾಂಶ ಸಂಗ್ರಹ ಕಾರ್ಯಕ್ಕೆ ಚಾಲನೆ ನುಡಿದಂತೆ ನಡೆಯುವ ಸರ್ಕಾರದ ಮತ್ತೊಂದು ನಡೆ । 24/7 ಕಾರ್ಯನಿರ್ವಹಿಸುವ ಹೆಲ್ಪ್‌ಲೈನ್ ನಂಬರ್ 9481359000

**ಹಂಪಿ ಟೈಮ್ಸ್ ಬೆಂಗಳೂರು**

ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಘೋಷಿಸಿದ್ದಂತೆ ಒಳಮೀಸಲಾತಿ ಜಾರಿಗೆ ನಾವು ಬದ್ಧ. ಈ ದಿಕ್ಕಿನಲ್ಲಿ ಇವತ್ತಿನಿಂದ ಮಹತ್ವದ ಹೆಜ್ಜೆ ಇಟ್ಟಿದ್ದೇವೆ. ಮೂರೂ ಹಂತಗಳಲ್ಲಿ ವೈಜ್ಞಾನಿಕ ದತ್ತಾಂಶ ಸಂಗ್ರಹ ನಡೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು.

"ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ–2025" ಕುರಿತಂತೆ ವಿಧಾನಸೌಧದ ಸಮ್ಮೇಳನ ಕೊಠಡಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಆಯೋಗ ರಚನೆ ಮಾಡಿದ್ದೆವು. ಪರಿಶಿಷ್ಠ ಜಾತಿಗಳಲ್ಲಿ ಒಳ ಮೀಸಲಾತಿ ಕುರಿತು ಸಮಿತಿ ವರದಿ ನೀಡಿದೆ.

ಸಂವಿಧಾನದ 341ನೇ ವಿಧಿಯ ಅಡಿಯಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 101 ಜಾತಿಗಳನ್ನು ಗುರುತಿಸಲಾಗಿದೆ. ಈ ಜಾತಿಗಳ ವೈಜ್ಞಾನಿಕ ವರ್ಗೀಕರಣ ಮಾಡಲು ದತ್ತಾಂಶವನ್ನು ಸಂಗ್ರಹಿಸಲು ಸಮೀಕ್ಷೆ ನಡೆಸಲು ಸಮಿತಿ ಶಿಫಾರಸ್ಸು ಮಾಡಿದೆ. 2011ರ ಜನಗಣತಿ ಆಧಾರದಲ್ಲಿ ಸದಾಶಿವ ಆಯೋಗ ಪರಿಶಿಷ್ಟ ಜಾತಿ ಸಮುದಾಯಗಳ ಜನಸಂಖ್ಯೆಯನ್ನು ಗುರುತಿಸಿತ್ತು. 1–8–2024 ರಲ್ಲಿ ಸುಪ್ರೀಂಕೋರ್ಟ್ ಒಳ ಮೀಸಲಾತಿ ಪರವಾಗಿ ನೀಡಿರುವ ಆದೇಶದಂತೆ ನಾವು ಮುಂದುವರೆದೆವು.



ಆದಿ ದ್ರಾವೀಡ, ಆದಿ ಕರ್ನಾಟಕ, ಆದಿ ಆಂಧ್ರ ಸಮುದಾಯದಲ್ಲಿ ಯಾರು ಎಷ್ಟು ಮಂದಿ ಇದ್ದಾರೆ ಎನ್ನುವುದು ಖಚಿತವಾಗಿ ಗೊತ್ತಾಗಬೇಕಿದೆ. ಎಡಗೈ ಸಮುದಾಯ, ಬಲಗೈ ಸಮುದಾಯ ಎಷ್ಟಿದೆ ಎನ್ನುವುದು ವೈಜ್ಞಾನಿಕವಾಗಿ ತಿಳಿಯಬೇಕಿದೆ. 101 ಪರಿಶಿಷ್ಠ ಜಾತಿಗಳಲ್ಲಿ ಒಳ ಮೀಸಲಾತಿ ಕೊಡುವಾಗ ನಿರ್ದಿಷ್ಟ ಅಂಕಿ ಅಂಶಗಳು ಬೇಕಾಗುತ್ತವೆ.

ಇವತ್ತಿನಿಂದ 17 ರವರೆಗೆ ಮನೆ ಮನೆಗೆ ಹೋಗಿ ದತ್ತಾಂಶ ಸಂಗ್ರಹಿಸುವ ಕೆಲಸ ಆಗ್ತದೆ. ಸುಮಾರು 65 ಸಾವಿರ ಶಿಕ್ಷಕರನ್ನು ಇದಕ್ಕಾಗಿ ನಿಯೋಜಿಸಲಾಗಿದೆ. 10–12 ಮಂದಿ ಶಿಕ್ಷಕರಿಗೆ ಒಬ್ಬ ಮೇಲ್ವಿಚಾರಕ ಇರ್ತಾರೆ. ಮನೆ ಮನೆ ಭೇಟಿ ಕೊಡುವ ಜೊತೆಗೆ, ಮೊದಲ ಹಂತದಲ್ಲಿ 5–5–25 ರಿಂದ 17–5–2025

19–5–2025 ರಿಂದ 21–5–2025 ರವರೆಗೆ ವಿಶೇಷ ಶಿಬಿರಗಳಲ್ಲಿ ಸಮೀಕ್ಷೆ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಸಮೀಕ್ಷೆ ನಡೆಯುತ್ತದೆ. ಯಾರಾದರೂ ಬಿಟ್ಟು ಹೋಗಿದ್ದರೆ ಶಿಬಿರಕ್ಕೆ ಬಂದು ಸೇರಿಸಬಹುದು.

ಮೂರನೇ ಹಂತದಲ್ಲಿ 19–5–2025 ರಿಂದ 22–5–2025 ರವರೆಗೆ ಆನ್ ಲೈನ್ ಮೂಲಕ ಸ್ವಯಂ ಘೋಷಣೆಗೆ ಅವಕಾಶ ಕಲ್ಪಿಸಲಾಗಿದೆ. ಮೂರೂ ಹಂತಗಳಲ್ಲಿ ವೈಜ್ಞಾನಿಕ ದತ್ತಾಂಶ ಸಂಗ್ರಹಿಸಲಾಗುವುದು ಎಂದರು.

ನಿಖರ ದತ್ತಾಂಶ ಸಂಗ್ರಹಿಸಿದ ಮೇಲೆ ನಮಗೆ ಶಿಫಾರಸ್ಸು ಮಾಡ್ತಾರೆ. ಒಟ್ಟು 60 ದಿನ ಸಮಯಾವಕಾಶ ನೀಡಲಾಗಿದೆ.

ಮೊಬೈಲ್ ಆಪ್

ಮೊಬೈಲ್ ಆಪ್ ಮೂಲಕವೂ ಸಮೀಕ್ಷೆಗೆ ಅವಕಾಶ ಮಾಡಿಕೊಡಲಾಗಿದೆ. ಬೆಳಗ್ಗೆ 6:30 ರಿಂದ ಸಂಜೆ 6:30ರವರೆಗೆ ಮೊಬೈಲ್ ಆಪ್ ಎನಾಬಲ್ ಮಾಡಲಾಗಿರುತ್ತದೆ. ಇದಕ್ಕೆ ಪರಿಶಿಷ್ಟ ಜಾತಿ ಸಮುದಾಯದ ಯಾರೂ ತಪ್ಪಿಸಬಾರದು.

ನಾವು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲೂ ವರದಿ ಜಾರಿ ಬಗ್ಗೆ ಘೋಷಣೆ ಮಾಡಿದ್ದೆವು. ಒಳ ಮೀಸಲಾತಿ ಪರವಾಗಿ ಸುಪ್ರೀಂಕೋರ್ಟ್ ಕೂಡ ಹೇಳಿದೆ. ಸಮುದಾಯದ ಸಂಘಟನೆಗಳು, ಮುಖಂಡರಿಗೂ ನಾವು ಒಳ ಮೀಸಲಾತಿ ಬಗ್ಗೆ ಭರವಸೆ ನೀಡಿದ್ದೆವು. ಆದ್ದರಿಂದ ದತ್ತಾಂಶ ಸಂಗ್ರಹ ಸಮೀಕ್ಷೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡು ಮಾಹಿತಿ ಕೊಡಿ ಎಂದು ಮುಖ್ಯಮಂತ್ರಿಗಳು ಮನವಿ ಮಾಡಿದರು. ಎಲ್ಲಾ ಸಂಘಟನೆಗಳೂ ಇದಕ್ಕೆ ಸಹಕರಿಸಿ ಎಂದೂ ಸಿಎಂ ಮನವಿ ಮಾಡಿದರು.

ಸಚಿವರಾದ ಹೆಚ್.ಸಿ.ಮಹದೇವಪ್ಪ, ಕೆ.ಹೆಚ್. ಮುನಿಯಪ್ಪ, ಶಿವರಾಜ್ ತಂಗಡಗಿ, ಶಿವಾನಂದ ಪಾಟೀಲ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಶಾಸಕರಾದ ರೂಪಶಶಿಕಲ್, ವಿಧಾನ ಪರಿಷತ್ ಸದಸ್ಯ ಸುದಾಮ ದಾಸ್, ನಸೀರ್ ಅಹಮದ್ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು.

# ಸರ್ಕಾರಿ ಪಾಲಿಟೆಕ್ನಿಕ್ ಡಿಪ್ಲೋಮಾ ಪ್ರವೇಶಾತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಸರ್ಕಾರಿ ಪಾಲಿಟೆಕ್ನಿಕ್ ನಲ್ಲಿ 2025–26ನೇ ಸಾಲಿಗೆ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸ್ ಪ್ರವೇಶಾತಿಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಸರ್ಕಾರಿ ಪಾಲಿಟೆಕ್ನಿಕ್ ನ ಪ್ರಾಚಾರ್ಯರು ತಿಳಿಸಿದ್ದಾರೆ.

ಅರ್ಜಿಗಳನ್ನು ಮೇ 12 ರಿಂದ 15 ರ ವರೆಗೆ ಬೆಳಿಗ್ಗೆ 10 ಗಂಟೆಯಿಂದ ಸಂಜೆ 05.30 ರ ವರೆಗೆ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರ ಕಚೇರಿ ಅಥವಾ ದೂ.08392–242228 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಮೇ 13 ರಿಂದ ಮಾವು ಮೇಳ ಮಳಿಗೆ ಕಾಯ್ದಿರಿಸಲು ನೋಂದಾಯಿಸಿ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯಲ್ಲಿ 2025–26ನೇ ಸಾಲಿನಲ್ಲಿ 9ನೇ ವರ್ಷದ ಮಾವು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಮೇ 13 ರಿಂದ ಮೇ 22ರ ವರೆಗೆ ಆಯೋಜಿಸಲಾಗಿದ್ದು, ಮಳಿಗೆ ಕಾಯ್ದಿರಿಸಲು ಮಾವು ಬೆಳೆಗಾರರು ತಮ್ಮ ಹೆಸರನ್ನು ನೋಂದಾಯಿಸುವಂತೆ ಕೊಪ್ಪಳ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ ಸಿ. ಉಕ್ಕುಂದ ಅವರು ತಿಳಿಸಿದ್ದಾರೆ.



ತೋಟಗಾರಿಕೆ ಇಲಾಖೆ ವತಿಯಿಂದ ರೈತರಿಂದ ನೇರವಾಗಿ ಗ್ರಾಹಕರಿಗೆ ಕೊಪ್ಪಳ ಜಿಲ್ಲೆಯಲ್ಲಿ ಬೆಳೆಯಲಾಗುತ್ತಿರುವ ಮಾವು ಬೆಳೆಗೆ ಉತ್ತಮ ಮಾರುಕಟ್ಟೆ ಒದಗಿಸುವ ಮತ್ತು ಕೊಪ್ಪಳ ಜಿಲ್ಲೆಯ ನಾಗರಿಕರಿಗೆ ಉತ್ತಮ ಗುಣಮಟ್ಟದ ಹಣ್ಣುಗಳನ್ನು ಯೋಗ್ಯ ಬೆಲೆಗೆ ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೇ ರೈತರಿಂದ ನೇರವಾಗಿ ಗ್ರಾಹಕರಿಗೆ ಒದಗಿಸುವ ಉದ್ದೇಶದಿಂದ ಮೇ 13 ರಿಂದ ಮೇ 22ರ ವರೆಗೆ ಮಾವು ಹಣ್ಣುಗಳ ಪ್ರದರ್ಶನ ಮತ್ತು ನೈಸರ್ಗಿಕವಾಗಿ ಮಾಗಿಸಿದ ಮಾವಿನ ಹಣ್ಣುಗಳ ಮಾರಾಟ ಮೇಳವನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಈ ಮೇಳದಲ್ಲಿ ಭಾಗವಹಿಸುವ ಜಿಲ್ಲೆಯ ಆಸಕ್ತ ಮಾವು ಬೆಳೆಗಾರರು ನೈಸರ್ಗಿಕವಾಗಿ ಮಾಗಿಸಿದ ಮಾವಿನ ಹಣ್ಣುಗಳನ್ನು ಮಾರಾಟ ಮಾಡಲು ಮುಂಗಡವಾಗಿ ಮಾರಾಟ ಮಳಿಗೆಗಳನ್ನು ಕಾಯ್ದಿರಿಸಲು ತಮ್ಮ ಹೆಸರನ್ನು ಇಲಾಖೆ ಅಧಿಕಾರಿಗಳ ಹತ್ತಿರ ನೋದಾಯಿಸಬೇಕು.

ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಆಸಕ್ತ ರೈತರು ತಮ್ಮ ಪಹಣಿ ಪ್ರತಿಯೊಂದಿಗೆ, ತಮ್ಮ ಹೆಸರು, ವಿಳಾಸ, ಸರ್ವೆ ನಂಬರ್, ಬೆಳೆ, ತಳಿಗಳು ಹಾಗೂ ವಿಸ್ತೀರ್ಣ ಮುಂತಾದ ವಿವರಗಳೊಂದಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಕೊಪ್ಪಳ ಮೊ.ಸಂ: 9448511649, ಗಂಗಾವತಿ ಮೊ.ಸಂ: 8861697989, ಕುಷ್ಟಗಿ ಮೊ.ಸಂ: 9611888607 ಮತ್ತು ಯಲಬುರ್ಗಾ ಮೊ.ಸಂ: 9945644338 ಹಾಗೂ ಕೊಪ್ಪಳ ತೋಟಗಾರಿಕೆ ಉಪನಿರ್ದೇಶಕರ ಕಛೇರಿಯ ಕೇಂದ್ರ ಸ್ಥಾನಿಕ ಸಹಾಯಕರ ಮೊ.ಸಂ: 9741057047 & ಕೊಪ್ಪಳ ತೋಟಗಾರಿಕೆ ಕಿಸಾನ ಕೇರ್ ಸೆಂಟರ್ ಮೊ.ಸಂ: 9902792635 ಇವರಿಗೆ ನೀಡುಬೇಕು. ತಮ್ಮ ಉತ್ಪನ್ನಗಳಿಗೆ ಯೋಗ್ಯ ಬೆಲೆ ದೊರೆಯಲು ಹಾಗೂ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಈ ಮೂಲಕ ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ಇಲಾಖೆ ಅಧಿಕಾರಿಗಳ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಗ್ರಾಮೀಣ ಪ್ರತ್ಯೇಕ ಅಧ್ಯಯನ ನಡೆಸಿ ವರದಿ ಸಲ್ಲಿಸಿ

ಮೂರನೇ ಪುಟದಿಂದ

ಮೈಸೂರು ವಿಭಾಗದಲ್ಲಿ 348 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರಬೇಕು. 610 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಕಲಬುರಗಿ ವಿಭಾಗದಲ್ಲಿ 395 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರಬೇಕಿತ್ತು, ಆದರೆ ಅಲ್ಲಿರುವದು ಕೇವಲ 352 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಅಂದರೆ ಕಲ್ಯಾಣ ಕರ್ನಾಟಕಕ್ಕೆ ನಿಯಮದಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರು ಆಗಿಲ್ಲ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಇರುವ ಪ್ರಾದೇಶಿಕ ಅಸಮಾನತೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ ಎಂದರು.

ಕಲ್ಯಾಣ ಕರ್ನಾಟಕ ಪ್ರದೇಶವು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅತ್ಯಂತ ವಿಭಿನ್ನವಾಗಿರುವ ಪ್ರದೇಶ, ಈ ಪ್ರದೇಶದಲ್ಲಿ ರಾಜ್ಯದ ಸರಾಸರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆ ಇದ್ದು. ಈ ಸಮುದಾಯಗಳು ಭೂ ರಹಿತರಾಗಿರುತ್ತಾರೆ. ಈ ಭಾಗದ ಒಟ್ಟು ಕೃಷಿ ಜಮೀನಿನಲ್ಲಿ ಇವರ ಪಾಲುದಾರಿಕೆ ಅತ್ಯಂತ ಕಡಿಮೆಯಾಗಿ ರುತ್ತದೆ. ರಾಯಚೂರು ತಾಲೂಕಿನಲ್ಲಿ ಕೃಷ್ಣ ಮತ್ತು ತುಂಗಭದ್ರಾ ನದಿಗಳಿದ್ದರೂ, ಬಹುಸಂಖ್ಯಾತ ಸಮುದಾಯ ಗಳಿಗೆ ಆರ್ಥಿಕ ಚಟುವಟಿಕೆಗಳಿಗೆ ಸಹಾಯಕವಾಗಿ ರುವದಿಲ್ಲ, ಈ ಅಂಶಗಳನ್ನು ಸಮಿತಿಯು ವರದಿ ಸಲ್ಲಿಸುವಾಗ ಅಂಕಿ ಅಂಶಗಳೊಂದಿಗೆ ಸೂಕ್ತ ಶಿಫಾರಸ್ಸು ಮಾಡಬೇಕೆಂದರು.

ಸಭೆಯಲ್ಲಿ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಸದಸ್ಯರಾದ ಎಸ್.ಟಿ.ಬಾಗಲಕೋಟೆ, ಸಂಗೀತಾ ಕೆ.ಎನ್., ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ತುಕಾರಾಂ ಪಾಂಡ್ವೆ ಹಾಗೂ ಇತರರು ಇದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
ನಂ.1 ಜಿಲ್ಲಾಮಟ್ಟದ ದಿನಪತ್ರಿಕೆ
E-PAPER USER ENGAGEMENT 1,50,000+
Searching for the perfect platform to promote your brand? Want to reach more people? Choose
HAMPI TIMES
Promote your business with us!
Place Your Ads in HAMPI TIMES Kannada Daily
- No.1 Local News Paper in the Vijayanagara Dist.
- 1 Lakh plus Digital readers & Growing
- Available in Print and Digital Edition
- Dedicated to Local and Regional news
- Trusted Readershiip Community
- E-paper available at www.hampitimes.com/epaper.hampitimes.com
- Flexible Advertising Packages
ADS
POWERFULL ADVERTISING FLATFORM FOR LOCAL BUSINESS!
Contact Us 9448633038